ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

26 ಜನವರಿ 2026 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 313 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಗುವಾಹಟಿಯಲ್ಲಿ ಭಾನುವಾರ ನ್ಯೂಜಿಲೆಂಡ್ ವಿರುದ್ಧ ನಡೆದ ಟಿ-20 ಪಂದ್ಯದಲ್ಲಿ ರೋಚಕ ಗೆಲುವು ಸಾಧಿಸಿ ಸರಣಿಯನ್ನು ವಶಪಡಿಸಿಕೊಂಡ ಭಾರತ ತಂಡ



## 77 ನೇ ಗಣರಾಜ್ಯೋತ್ಸವದ ಶುಭಾಶಯಗಳು



# ರಾಜ್ಯಪಾಲರ ಗಣರಾಜ್ಯೋತ್ಸವ ಭಾಷಣದತ್ತ ಚಿತ್ತ

### ಸರ್ಕಾರದ ವಿರುದ್ಧ ಹಠ ಮುಂದುವರಿಸುವ ಸಾಧ್ಯತೆ | ಕಾಂಗ್ರೆಸ್‌ನಿಂದ ಒತ್ತಡ ತಂತ್ರ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನ ಮಂಡಲ ಜಂಟಿ ಅಧಿವೇಶನದಲ್ಲಿ ರಾಜ್ಯ ಸರ್ಕಾರದ ಸಿದ್ಧ ಭಾಷಣ ಓದಲು ನಿರಾಕರಿಸಿದ್ದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸೋಮವಾರದ ಗಣರಾಜ್ಯೋತ್ಸವದಲ್ಲಿ ಸರ್ಕಾರ ಸಿದ್ಧಪಡಿಸಿಕೊಡುವ ಭಾಷಣವನ್ನು ಪೂರ್ಣ ಪ್ರಮಾಣದಲ್ಲಿ ಓದುತ್ತಾರೆಯೇ ಎಂಬ ಚರ್ಚೆ ಜೋರಾಗಿದೆ.

ಕೇಂದ್ರ ಸರ್ಕಾರದ ವಿರುದ್ಧ ಟೀಕೆಯ ಭಾಷಣ ಮಾಡುವುದಿಲ್ಲವೆಂದು ರಾಜ್ಯಪಾಲರು ಪಟ್ಟು ಹಿಡಿದಿದ್ದು, ಲೋಕಭವನ ಹಾಗು ರಾಜ್ಯ ಸರ್ಕಾರದ ನಡುವೆ ಬಿಕ್ಕಟ್ಟಿಗೆ ಕಾರಣವಾಗಿದೆ. ಕೇಂದ್ರದಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ನ್ಯಾಯಯುತ ಪಾಲು ಕೊಡುತ್ತಿಲ್ಲ ಹಾಗು ಕೇಂದ್ರದ ಯೋಜನೆಗಳನ್ನು ಟೀಕಿಸುವ ಕೆಲ ಸಾಲುಗಳನ್ನು ತೆಗೆದು ಹಾಕಬೇಕೆಂಬ ರಾಜ್ಯಪಾಲರ ಸೂಚನೆಗೆ ಸರ್ಕಾರ ಸಮ್ಮತಿಸಿರಲಿಲ್ಲ. ಹೀಗಾಗಿ ಅಧಿವೇಶನದಲ್ಲಿ ರಾಜ್ಯಪಾಲರ ವಿರುದ್ಧ ಕಾಂಗ್ರೆಸ್‌ನಿಂದ ಪ್ರತಿ



ರೋಧ ವ್ಯಕ್ತವಾಯಿತು. ಗಣ ರಾಜ್ಯೋತ್ಸವ ಭಾಷಣದಲ್ಲೂ ಸರ್ಕಾರ ಅದೇ ಅಂಶಗಳನ್ನು ಸೇರಿಸಿದರೆ ರಾಜ್ಯಪಾಲ ಗೆಹಲೋತ್ ಓದುತ್ತಾರೋ ಅಥವಾ ತಾವೇ ಸಿದ್ಧಪಡಿಸಿದ ಭಾಷಣ ಮಾಡಿ ಹಠ ಸಾಧಿಸುತ್ತಾರೋ ಎಂಬ ಕುತೂಹಲ ಕೆರಳಿದೆ. ರಾಜ್ಯಪಾಲರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿರುವ ರಾಜ್ಯ ಸರ್ಕಾರಕ್ಕೆ ಗಣರಾಜ್ಯೋತ್ಸವ ಅವಕಾಶ ಅಸ್ತ್ರವಾಗಿದೆ.

**ರಾಜ್ಯಪಾಲರ ಲೋಪ ಎತ್ತಿ ಹಿಡಿದ ಖರ್ಗೆ**

ವಿಶೇಷ ಅಧಿವೇಶನದ ವೇಳೆ ರಾಜ್ಯ ಸರ್ಕಾರದ ಭಾಷಣ ಓದಲು ಒಪ್ಪದ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರ ನಡೆಯನ್ನು ಖಂಡಿಸಿರುವ ಸಚಿವ ಪ್ರಿಯಾಂಕ್ ಖರ್ಗೆ ರಾಜ್ಯಪಾಲರ

> **ಬಿಜೆಪಿ ಮತ್ತು ರಾಜ್ಯಪಾಲರು ಸಂವಿಧಾನಕ್ಕೆ ಅಪಚಾರ ಮಾಡಿದ್ದಾರೆ, ಕೇವಲ 37 ಸಕೆಂಡ್‌ಗಳಲ್ಲಿ ರಾಜ್ಯಪಾಲರು ಎಸಗಿದ ಅಪಚಾರ ಒಂದೆರಡಲ್ಲ. ರಾಜ್ಯಪಾಲರು ರಾಷ್ಟ್ರಗೀತೆ, ಸಂವಿಧಾನ, ಕರ್ನಾಟಕ ಹಾಗು ಕನ್ನಡಿಗರಿಗೆ ಅವಮಾನ ಮಾಡಿದ್ದಾರೆ.**
> **-ಪ್ರಿಯಾಂಕ್ ಖರ್ಗೆ, ಸಚಿವ**

ರಿಮೋಟ್ ಕಂಟ್ರೋಲ್ ಕೇಶವ ಕೃಪಾದಲ್ಲಿದೆಯೇ ಎಂದು ಪ್ರಶ್ನಿಸಿದ್ದಾರೆ.

ಈ ಕುರಿತು ಎಕ್ಸ್ ಮಾಡಿರುವ ಅವರು, ರಾಷ್ಟ್ರಗೀತೆಗೆ ಅಪಚಾರ, ಸಂವಿಧಾನಕ್ಕೆ ದ್ರೋಹ, ಕರ್ನಾಟಕಕ್ಕೆ ಅಗೌರವ, ಕನ್ನಡಿಗರಿಗೆ ಅಪಮಾನ, ರಾಜ್ಯ ಸರ್ಕಾರಕ್ಕೆ ಅವಮಾನ... ರಾಜ್ಯಪಾಲರಿಂದ ಇಷ್ಟೆಲ್ಲ ಅಪಚಾರವಾದರೂ ಬಿಜೆಪಿಯವರ ಸಮರ್ಥನೆ ನೋಡುತ್ತಿದ್ದರೆ ರಾಜ್ಯಪಾಲರ ರಿಮೋಟ್ ಕಂಟ್ರೋಲ್ ಕೇಶವ ಕೃಪಾದಲ್ಲಿದೆಯೇ ಅಥವಾ ಜಗನ್ನಾಥ ಭವನದಲ್ಲಿ ದೆಯೇ ಎಂಬ ಅನುಮಾನ ಮೂಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾಷಣದ ನಂತರ ರಾಷ್ಟ್ರಗೀತೆಯ ಬ್ಯಾಂಡ್ ನುಡಿಸುವುದು ನಿಯಮ. ರಾಜ್ಯಪಾಲರು ರಾಷ್ಟ್ರಗೀತೆ ನುಡಿಸಲು ಒಂದು ಕ್ಷಣವೂ ಅವಕಾಶ ನೀಡದೆ ಅವಸರದ ನಡೆ ಸರಿಯೇ ಎಂದು ಪ್ರಶ್ನಿಸಿದ್ದಾರೆ. ರಾಜ್ಯಪಾಲರ ಈ ದೇಶದ್ರೋಹಿ ನಡವಳಿಕೆಯನ್ನು ಖಂಡಿಸದೆ ಸಮರ್ಥಿಸುತ್ತಿರುವ ಬಿಜೆಪಿಯವರದ್ದು ಬೂಟಾಟಿಕೆಯ ದೇಶಭಕ್ತಿ ಎಂಬುದು ಮತ್ತೊಮ್ಮೆ ಸಾಬೀತಾಗಿದೆ. ಸಂಸತ್ತಿನಲ್ಲಿ ವಂದೇ ಮಾತರಂ ಬಗ್ಗೆ ಮೂರು ದಿನಗಳ ಕಾಲ ಚರ್ಚೆ ನಡೆಸುವ ಬಿಜೆಪಿಗೆ ಜನ ಗಣ ಮನದ ಬಗ್ಗೆ ಮೂರು ನಿಮಿಷವೂ ಚರ್ಚಿಸದಷ್ಟು ಅಸಹನೆ ಏಕೆಂದು ಪ್ರಶ್ನಿಸಿದ್ದಾರೆ. ರಾಷ್ಟ್ರಗೀತೆಯನ್ನು ವಿರೋಧಿಸುವ ಸಂಘದ ಪಾಠವನ್ನು ಪಾಲಿಸುತ್ತಿದ್ದಾರೆಯೇ. ಬಿಜೆಪಿಯವರಲ್ಲಿ ಎಳ್ಳು ಕಾಳಷ್ಟು ದೇಶಭಕ್ತಿ ಇದ್ದಿದ್ದೇ ಆದರೆ ರಾಷ್ಟ್ರಗೀತೆಗೆ, ಸಂವಿಧಾನಕ್ಕೆ ರಾಜ್ಯಪಾಲರಿಂದ ಆಗಿರುವ ಅವಮಾನವನ್ನು ಖಂಡಿಸಲಿ ಎಂದು ಆಗ್ರಹಿಸಿದ್ದಾರೆ.

### ಕಾನೂನು ಕ್ರಮ ಸರಿಯಲ್ಲ : ಬಸವರಾಜ ಬೊಮ್ಮಾಯಿ

ರಾಜ್ಯಪಾಲರ ವಿರುದ್ಧ ರಾಜ್ಯ ಸರ್ಕಾರವು ಕಾನೂನು ಕ್ರಮಕ್ಕೆ ಮುಂದಾಗಿರುವುದು ಖಂಡನೀಯವೆಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಅವರು ಹೇಳಿದ್ದಾರೆ.

ರಾಜ್ಯ ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳುವುದಕ್ಕೆ ಮತ್ತು ರಾಜಕೀಯದ ಕಾರಣಕ್ಕೆ ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದೆ. ಈ ವಿಚಾರದಲ್ಲಿ ರಾಜ್ಯಪಾಲರನ್ನು ಸಿಲುಕಿಸಿರುವುದು ಅವರಿಗೆ ಮಾಡುತ್ತಿರುವ ಅವಮಾನವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣದ ಮೊದಲ ಮತ್ತು ಕೊನೆಯ ಪುಟಗಳನ್ನು ರಾಜ್ಯಪಾಲರು ಓದದೇ ಇರುವ ಹಲವು ನಿದರ್ಶನಗಳು ನಮ್ಮೆದುರು ಇವೆ. ಆದರೆ, ಆ ಕಾರಣಕ್ಕೆ ಅವರನ್ನು ಗೂಂಡಾಗಿರಿಗೆ ಗುರಿ ಮಾಡುವುದು ಸರಿಯಲ್ಲ. ಈ ಹಿಂದೆ ರಾಜ್ಯಪಾಲರಾಗಿದ್ದ ಎಚ್.ಆರ್.ಭಾರಧ್ವಾಜ್ ಅವರು ಹಲವು ಬಾರಿ ಮಿತಿ ಮೀರಿ ವರ್ತಿಸಿದ್ದಾರೆ. ಆಗ ರಾಜಭವನವು, ಕಾಂಗ್ರೆಸ್ ಭವನ ಆಗಿತ್ತು ಎಂಬುದನ್ನು ಸಿದ್ದರಾಮಯ್ಯ ಅವರು ಮರೆಯುತ್ತಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ. ಸರ್ಕಾರವು ಕ್ರಮ ತೆಗೆದುಕೊಳ್ಳಲೇಬೇಕು ಎಂದಿದ್ದರೆ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ವಿರುದ್ಧ ತೆಗೆದುಕೊಳ್ಳಬೇಕು. ಅವರನ್ನು ತಕ್ಷಣವೇ ವಜಾ ಮಾಡಬೇಕೆಂದು

## ಇಂದು 77ನೇ ಗಣರಾಜ್ಯೋತ್ಸವ

• ಪ್ರಜೋದಯ ವರದಿ

**ಹಾಸನ:** ನಗರದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಜ.6ರ ಸೋಮವಾರ ಬೆಳಿಗ್ಗೆ 9 ಗಂಟೆಗೆ 77ನೇ ಗಣರಾಜ್ಯೋತ್ಸವ ನೆರವೇರಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಧ್ವಜಾರೋಹಣ ನೆರವೇರಿಸುವರು. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಶ್ರೇಯಸ್ ಪಟೇಲ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತಾ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸೌರಭ್‌ಕುಮಾರ್ ಸೇರಿ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

77ನೇ ಗಣ್ಯರಾಜೋತ್ಸವ ಅಂಗವಾಗಿ ಜಿಲ್ಲೆಯ ವಿವಿಧ ಕ್ಷೇತ್ರದ ಸಾಧಕರನ್ನು ಜಿಲ್ಲಾಡಳಿತದಿಂದ ಸನ್ಮಾನಿಸಲಾಗುತ್ತಿದ್ದು, ಅವರ ವಿವರ ಇಲ್ಲಿದೆ. ಪೌರ ಕಾರ್ಮಿಕರ ವಿಭಾಗದಿಂದ ಕೃಷ್ಣ, ಸ್ಕೌಟ್ಸ್ ಮತ್ತು ಗೈಡ್ಸ್‌ನಿಂದ ಕೆ.ಆರ್. ಕೀರ್ತಿಕುಮಾರ್, ಹೆಚ್.ಎಂ.ಪ್ರಿಯಾಂಕ, ಅಪಘಾತ ರಹಿತ ವಾಹನ ಚಾಲಕರಾಗಿರುವ ಸಿ.ಎಂ.ಪ್ರಕಾಶ್, ಟಿ.ಎ.ಮಹೇಶ್, ಯಾವುದೇ ಲೋಪವಿಲ್ಲದೆ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿರುವ ರಾಜಸ್ವ ನಿರೀಕ್ಷಕ ಎಂ.ವಿ.ಚಂದ್ರಶೇಖರ್, ಚೋಳೇನಹಳ್ಳಿ ವೃತ್ತ ಗ್ರಾಮಾಡಳಿತಾಧಿಕಾರಿ ಜೆ.ಸಿ.ಲಕ್ಷ್ಮೀ, ಹಾಸನಾಂಬ ಕಲಾಕ್ಷೇತ್ರ ಸಮೀಪದ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿ ನಿಲಯ ವಾರ್ಡನ್ ಜಿ.ಎಲ್.ಮಮತ, ಕ್ರೀಡಾ ಕ್ಷೇತ್ರದಿಂದ ದೇಷ್ಣ ಪಿ.ಶೆಟ್ಟಿ, ಸಿ.ಎ.ಪರಿಣತ್‌ಗೌಡ, ದಿವ್ಯಾಂಗ ಕ್ರೀಡಾಪಟುಗಳಾದ ಎಂ.ಆರ್.ಹಿತನ್‌ಗೌಡ, ಎಸ್.ಆರ್.ಪರಮೇಶ್, ವೈದ್ಯಕೀಯ ಕ್ಷೇತ್ರದಿಂದ ಡಾ|| ಹೆಚ್.ಜಿ.ಜಗದೀಶ್, ಬೂವನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸುರಕ್ಷಾಧಿಕಾರಿ ಶೋಭಾ, ಪತ್ರಿಕಾ ಕ್ಷೇತ್ರದಿಂದ ಜಿ.ಚಂದ್ರಶೇಖರ್, ಲಕ್ಷ್ಮೀ ಎಸ್.ಪ್ರಸಾದ್, ಮರಣದ ಬಳಿಕ ಅಂಗಾಂಗ ದಾನ ಮಾಡಿ ಮಾದರಿಯಾಗಿರುವ ದಿ.ವೈ.ಕೆ.ಚಂದನ್, ದಿ.ಕೆ.ಡಿ.ನಾಗರಾಜ, ದಿ.ಯೋಗೀಶ್, ದಿ.ಆರ್.ರವಿನಾಯ್ಕ, ಕಲಾಕ್ಷೇತ್ರದಿಂದ ಎ.ಎಂ.ಸುನಿಲ್‌ಕುಮಾರ್, ಸವಿತಾ ಕುಮಾರ್, ಸಮಾಜ ಸೇವಕ ಅಜಮ್ ಖಾನ್, ಕೃಷಿ ಕ್ಷೇತ್ರದಿಂದ ದ್ರಾಕ್ಷಾಯಿಣಿ ಅವರನ್ನು ಆಯ್ಕೆ ಮಾಡಲಾಗಿದೆ.

# ಮಕ್ಕಳ ಪ್ರತಿಭೆ ಗುರುತಿಸುವ ಕೆಲಸವಾಗಲಿ

### ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಮಲ್ಲಿಕಾರ್ಜುನಯ್ಯ



• ಪ್ರಜೋದಯ ವರದಿ

**ಹಾಸನ:** ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕೆಂದು ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ಅಧ್ಯಕ್ಷ ಮಲ್ಲಿಕಾರ್ಜುನಯ್ಯ ಅವರು ಹೇಳಿದರು.

ಕನ್ನಡ ಪ್ರಭ ಪತ್ರಿಕೆ, ಸುವರ್ಣ ನ್ಯೂಸ್ ಹಾಗು ಜನಮಿತ್ರ ಪ್ರಾದೇಶಿಕ ಪತ್ರಿಕೆ ಸಹಭಾಗಿತ್ವದಲ್ಲಿ ಜಿಲ್ಲಾ ಕಾರ್ಯನಿರತ ಸಂಘ ಮತ್ತು ಪ್ರಜೋದಯ ಪತ್ರಿಕೆ, ಚಿತ್ಕಲಾ ಫೌಂಡೇಶನ್ ಸಹಕಾರದಲ್ಲಿ ನಗರದ ಗಾಂಧಿ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಮಾತನಾಡಿದ ಅವರು, ಪತ್ರಿಕೆಗಳು ಕೇವಲ ರಾಜಕೀಯ, ಸಾಮಾಜಿಕ ಕ್ಷೇತ್ರದ ಹೊರತಾಗಿ ಮಕ್ಕಳಲ್ಲಿರುವ ನೈಪುಣ್ಯತೆಯನ್ನು ಹೊರ ತೆಗೆಯಲು ಚಿತ್ರಕಲಾ ಸ್ಪರ್ಧೆ ಹಮ್ಮಿಕೊಂಡಿರುವುದು ಶ್ಲಾಘನೀಯವೆಂದರು.

ಸೋಲೇ ಗೆಲುವಿನ ಸೋಪಾನ. ಸ್ಪರ್ಧೆಯಲ್ಲಿ ಸೋಲು-ಗೆಲವು ಮುಖ್ಯವಲ್ಲ. ಹಿಂದಿನ ತಪ್ಪುಗಳನ್ನು ತಿದ್ದಿಕೊಂಡರೆ ಹೆಚ್ಚಿನ ಬದಲಾವಣೆ ಕಂಡುಕೊಳ್ಳಬಹುದು. ಮಕ್ಕಳಲ್ಲಿ ಕೇವಲ ಚಿತ್ರ ಬಿಡಿಸುವುದಷ್ಟೇ ಅಲ್ಲ, ಅರಣ್ಯ, ಪರಿಸರ ಹಾಗು ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸುವುದು ಕೂಡ ಚಿತ್ರಕಲಾ ಸ್ಪರ್ಧೆಯ ಪ್ರಮುಖ ಆಶಯವೆಂದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆಯನ್ನು ಹೊರತರಲು ಉತ್ತಮ ವೇದಿಕೆ ಒದಗಿಸಿಕೊಡಲಾಗಿದೆ. ಪರಿಸರ ಮತ್ತು ವನ್ಯ ಜೀವಿಗೆ ಸಂಬಂಧಿಸಿ ಚಿತ್ರಕಲಾ ಸ್ಪರ್ಧೆ ಆಯೋಜಿಸಿರುವುದು ಉತ್ತಮ ಬೆಳವಣಿಗೆ. ಇಂದು ಪರಿಸರದ ಹಾನಿಯಿಂದ ಮಾರಕ ರೋಗಕ್ಕೆ ತುತ್ತಾಗುತ್ತಿದ್ದೇವೆ. ಈ ನಿಟ್ಟಿನಲ್ಲಿ ಯುವ ಪೀಳಿಗೆಯನ್ನು ಜಾಗೃತಿ ಮೂಡಿಸಲು ಚಿತ್ರಕಲೆ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಗೆಲ್ಲುವುದಕ್ಕಿಂತ ಭಾಗವಹಿಸುವಿಕೆ ಮುಖ್ಯವೆಂದು ತಿಳಿಸಿದರು.

ಜನಮಿತ್ರ ಪತ್ರಿಕೆ ಪ್ರಧಾನ ಸಂಪಾದಕ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಯಾವುದೇ ಸ್ಪರ್ಧೆಯಲ್ಲಿ ಸೋಲು, ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ. ನಮ್ಮ ಜಿಲ್ಲೆಯ ಮಕ್ಕಳನ್ನು ಪ್ರೋತ್ಸಾಹಿಸಲು ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವುದು ಬಹುಮಾನಕ್ಕಲ್ಲ ತಮ್ಮಲ್ಲಿರುವ ಪ್ರತಿಭೆ ಹೊರಹಾಕಲು. ಸಿಗುವ ಅವಕಾಶವನ್ನು ಬಳಸಿಕೊಳ್ಳಬೇಕು. ಸ್ಪರ್ಧೆಯಲ್ಲಿ ವಿಜೇತರಾದ ಮೂವರು ಸ್ಪರ್ಧಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗುತ್ತಾರೆ. ರಾಜ್ಯ ಮಟ್ಟದಲ್ಲೂ ವಿಜೇತರಾಗಿ ಜಿಲ್ಲೆಗೆ ಕೀರ್ತಿ ತರಬೇಕೆಂದು ಶುಭ ಹಾರೈಸಿದರು.

ಚಿತ್ಕಲಾ ಫೌಂಡೇಶನ್ ಅಧ್ಯಕ್ಷ ಬಿ.ಆರ್.ದೇಸಾಯಿ ಅವರು ಮಾತನಾಡಿ, ಹಾಸನ ಜಿಲ್ಲೆ ಕಲೆಗೆ ಹೆಸರುವಾಸಿ, ಅರಸೀಕೆರೆಯಲ್ಲಿ ಆದಿ ಮಾನವನ ಚಿತ್ರಕಲೆ ಕೂಡ ಇದೆ. ಕಲೆ ಮತ್ತು ಸಂಸ್ಕೃತಿಗೆ ಸಾವಿಲ್ಲ. ಕಲೆ ನಿರಂತರವಾಗಿ ಮನುಷ್ಯತ್ವನ್ನು ಬೆಳೆಸುತ್ತದೆ. ಅವಕಾಶ ಮತ್ತು ಪ್ರೋತ್ಸಾಹ ಇದ್ದಾಗ ಮಾತ್ರ ಬೆಳವಣಿಗೆ ಸಾಧ್ಯವೆಂದು ಹೇಳಿದರು.

**ವಿಜೇತರ ವಿವರ**

ಸ್ಪರ್ಧೆಯಲ್ಲಿ ವಿವಿಧ ತಾಲ್ಲೂಕುಗಳಲ್ಲಿ ವಿಜೇತರಾದವರು ಸೇರಿ ಸುಮಾರು 30ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಹಾಸನದ ಸಾನ್ವಿ ಎಸ್.ಪ್ರಥಮ, ಸಕಲೇಶಪುರದ ವೈ.ಎಸ್.ತೋಸಿತ್ ದ್ವಿತೀಯ, ಬೇಲೂರಿನ ಸಾನಿಕಾ ಕೆ.ಶೆಟ್ಟಿ ಹಾಗು ಸಕಲೇಶಪುರದ ಎ.ಜೆ.ಲಿಖಿತಾ ತೃತೀಯ ಸ್ಥಾನ ಪಡೆದುಕೊಂಡು ರಾಜ್ಯ ಮಟ್ಟಕ್ಕೆ ಆಯ್ಕೆಯಾದರು.

ಹಾಸನದ ಆಶಿಸ್ ಚಿಕ್ಲೇರ್ ಹಾಗು ಬೇಲೂರಿನ ಹುದಾ ಸಮಾಧಾನಕರ ಬಹುಮಾನ ಪಡೆದರು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು. ಜನಮಿತ್ರ ಪತ್ರಿಕೆ ಸಂಪಾದಕ ಸಿ.ಆರ್.ನವೀನ್, ಸುವರ್ಣ ವಾಹಿನಿ ಜಿಲ್ಲಾ ವರದಿಗಾರ ಹರೀಶ್, ಕನ್ನಡ ಪ್ರಭಾ ಜಿಲ್ಲಾ ವರದಿಗಾರ ಮೋಹನ್ ಕುಮಾರ್ ಮತ್ತಿತರರು ಇದ್ದರು.

# ಹಿಂದೂ ಧರ್ಮ ಉಳಿವಿಗಾಗಿ ಒಗ್ಗಟ್ಟಿನ ಅವಶ್ಯ ಹೆಚ್ಚಿದೆ

### ನಿಶ್ಚಲಾನಂದನಾಥ ಸ್ವಾಮೀಜಿ ಅಭಿಮತ | ಶ್ರವಣಬೆಳಗೊಳದಲ್ಲಿ ಹಿಂದೂ ಸಮಾಜೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪ್ರಾಚೀನ ಇತಿಹಾಸ ಹೊಂದಿರುವ ಸನಾತನ ಧರ್ಮ ನಾಶವಾಗುವ ಮೊದಲು ಯುವ ಸಮಾಜ ಎಚ್ಚೆತ್ತು ಧರ್ಮದ ಉಳಿವಿಗಾಗಿ ಒಗ್ಗೂಡಬೇಕಿದೆ ಎಂದು ಕೆಂಗೇರಿಯ ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದದರು.

ತಾಲ್ಲೂಕಿನ ಶ್ರವಣಬೆಳಗೊಳದ ಬಾಹುಬಲಿ ಪಾಲಿಟೆಕ್ನಿಕ್ ಆವರಣದಲ್ಲಿ ತಾಲ್ಲೂಕು ಹಿಂದೂ ಸಮಾಜೋತ್ಸವ ಸಮಿತಿಯಿಂದ ಭಾನುವಾರ ಏರ್ಪಡಿಸಿದ್ದ ಹಿಂದೂ ಸಮಾಜೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೈ ಮರೆತರೆ ಮುಂದೊಂದು ದಿನ ಪಶ್ಚಾತ್ತಾಪ ಪಡಬೇಕಾಗುತ್ತದೆ. ಹಿಂದೂ ಧರ್ಮ



ನಿನ್ನೆ-ಮೊನ್ನೆ ಹುಟ್ಟಿದ್ದಲ್ಲ. ಅದಕ್ಕೆ ಅನಾದಿ ಕಾಲದ ಇತಿಹಾಸವಿದೆ. ಸಂಸ್ಕೃತಿಯೇ ಸನಾತನ ಧರ್ಮವಾಗಿ ಬೆಳೆದು ಬಂದಿದೆ. ಇಡೀ ವಿಶ್ವವೇ ಹಿಂದೂ ಧರ್ಮ ಹಾಗು ಸಂಸ್ಕೃತಿಯನ್ನು ಮೆಚ್ಚುತ್ತಿದೆ. ಆದರೆ, ಕೆಲವರು ಧರ್ಮದ ಬಗ್ಗೆ ಹಗುರವಾಗಿ ಮಾತನಾಡುವುದು ಹಾಗು ಕುಟುಕುವುದು ಏಕೆ ಎಂಬುದೇ ಯಕ್ಷ ಪ್ರಶ್ನೆಯಾಗಿದೆ ಎಂದರು.

**ಅವಹೇಳನ ಒಳ್ಳೆಯದಲ್ಲ**

ಹಿಂದೂ ಧರ್ಮ, ಗುಡಿ ಗೋಪುರ, ಸಂಸ್ಕೃತಿ-ಸಂಸ್ಕಾರದ ಬಗ್ಗೆ ಅವಹೇಳನ ಮಾಡುವುದು ಒಳ್ಳೆಯದಲ್ಲ. ಉಂಡ ಮನೆಗೆ ದ್ರೋಹ ಬಗೆಯುವುದು, ಜನ್ಮ ನೀಡಿದ ತಾಯಿಯ ಕುತ್ತಿಗೆ ಕೊಯ್ಯುವುದು ಎರಡೂ ಒಂದೇ. ಅದಕ್ಕೆ ಮುಂದೊಂದು ದಿನ ಪಶ್ಚಾತ್ತಾಪ ಪಡಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

### ಶರಣ್ ಪಂಪ್‌ವೆಲ್‌ಗೆ ಪ್ರವೇಶ ನಿಷೇಧ

ಶ್ರವಣಬೆಳಗೊಳ ಹಾಗು ಅರಸೀಕೆರೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹಿಂದೂ ಸಮಾಜೋತ್ಸವದಲ್ಲಿ ದಿಕ್ಸೂಚಿ ಭಾಷಣಕಾರರಾಗಿ ಭಾಗವಹಿಸಬೇಕಿದ್ದ ವಿಶ್ವ ಹಿಂದೂ ಪರಿಷತ್ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಅವರಿಗೆ ಜಿಲ್ಲಾ ಪ್ರವೇಶ ನಿಷೇಧಿಸಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಆದೇಶಿಸಿದ್ದರು. ಶರಣ್ ಪಂಪ್‌ವೆಲ್ ಅವರು ಬಲಪಂಥೀಯ ವಿಚಾರ ಧಾರೆಗಳಿಂದ ಪ್ರಭಾವಿತರಾಗಿ ಪ್ರಚೋದನಕಾರಿ ಭಾಷಣ ಮಾಡಿರುವ ಸಂಬಂಧ ವಿವಿಧ ಜಿಲ್ಲೆಗಳಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ಜಿಲ್ಲೆಯಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಅವರು ಜಿಲ್ಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತಿಲ್ಲವೆಂದು ಆದೇಶ ಹೊರಡಿಸಿದ್ದಾರೆ. ರಾಜ್ಯ ಸರ್ಕಾರದ ಈ ನೀತಿಯನ್ನು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಸೇರಿ ಬಿಜೆಪಿ ಮುಖಂಡರು ಖಂಡಿಸಿದ್ದಾರೆ.

ಕತ್ತರಿಘಟ್ಟದ ಶ್ರೀ ಮೆಳಿಯಮ್ಮ ಆಧ್ಯಾತ್ಮಿಕ ಕೇಂದ್ರದ ಶ್ರೀ ಚಂದ್ರಶೇಖರ ಗುರೂಜಿ ಅವರು ಮಾತನಾಡಿ, ಉತ್ಸವ ಎಂದರೆ ಒಂದು ಸಮಾಜ ಅಥವಾ ಧರ್ಮ ಒಗ್ಗೂಡುವ ವೇದಿಕೆ. ಆಚಾರ-ವಿಚಾರಗಳ ಸಂಗತಿಗೆ ಬಂದಾಗ ಭಾರತ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ನಮ್ಮ ಸಂಸ್ಕೃತಿ, ಸಂಸ್ಕಾರ ಹಾಗು ಸಂಪ್ರದಾಯವನ್ನು ವಿದೇಶಿಯರು ಇಷ್ಟಪಡುತ್ತಾರೆ ಎಂದರು.

» ನಾಲ್ಕನೇ ಪುಟದಲ್ಲಿ

## ಸುಳ್ಳು ಆರೋಪಗಳ ವಿರುದ್ಧ ಕ್ರಮಕ್ಕೆ ಮುರುಳಿ ಮೋಹನ್ ಆಗ್ರಹ

• ಪ್ರಜೋದಯ ವರದಿ

**ಸಕಲೇಶಪುರ:** ನನ್ನ ರಾಜಕೀಯ ಏಳಿಗೆ ಸಹಿಸಲಾಗದ ಕೆಲವರು ಆಧಾರ ರಹಿತ ಆರೋಪ ಮಾಡುತ್ತಿದ್ದು, ಅಂತಹವರ ವಿರುದ್ಧ ಕ್ರಮ ಜರುಗಿಸಬೇಕೆಂದು ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುರುಳಿ ಮೋಹನ್ ಅವರು ನಗರ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಜ.16ರಂದು ಪಟ್ಟಣದಲ್ಲಿ ನಡೆದ ಜನ ಸ್ಪಂದನ ಕಾರ್ಯಕ್ರಮದಲ್ಲಿ ನನ್ನಿಂದ ಯಾವ ಲೋಪವಾಗದಿದ್ದರೂ ಕೆಲವರು ಹಗೆತನ ಸಾಧಿಸುತ್ತಿದ್ದಾರೆ. ಹಾಸನದಲ್ಲಿ ನಿರಂತರ ಸುದ್ದಿಗೋಷ್ಠಿ ನಡೆಸಿ ನನ್ನ ಹೆಸರಿಗೆ ಮಸಿ ಬಳಿಯುತ್ತಿದ್ದಾರೆಂದು ದೂರಿನಲ್ಲಿ ತಿಳಿಸಿದ್ದಾರೆ.

ಜ.23 ರಂದು ಹಾಸನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ



ರತನ್, ಸದಾಶಿವ, ಕೃಷ್ಣಮೂರ್ತಿ, ರುದ್ರಪ್ಪ ಎಂಬುವವರು, ನನ್ನನ್ನು ಕೊಲೆಗಾರ ಎಂದು ಹೇಳಿಕೆ ನೀಡಿದ್ದಾರೆ. ಯಾವ ಸ್ಪಷ್ಟ ಮಾಹಿತಿ ಇಲ್ಲದೆ ನನ್ನ ಮೇಲೆ ಗಂಭೀರ ಆರೋಪ ಮಾಡಿದ್ದಾರೆ. ಅದರಿಂದ ನನ್ನ ಮನಸಿಗೆ ನೋವುಂಟಾಗಿದೆ. ಇಲ್ಲಸಲ್ಲದ ಹೇಳಿಕೆ ನೀಡುತ್ತಿರುವವರ ವಿರುದ್ಧ ಕ್ರಮ ಜರುಗಿಸಬೇಕೆಂದು ನಗರ ಪೊಲೀಸ್ ನಿರೀಕ್ಷಕ ವನರಾಜ್ ಅವರಿಗೆ ದೂರು ಸಲ್ಲಿಸಿದ್ದಾರೆ.

## ಗೊರೂರು ಶ್ರೀ ಯೋಗಾನರಸಿಂಹ ಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

**ಅರಕಲಗೂಡು :** ರಥ ಸಪ್ತಮಿ ದಿನವಾದ ಭಾನುವಾರ ಗೊರೂರು ಶ್ರೀಯೋಗಾನರಸಿಂಹ ಸ್ವಾಮಿ, ತಾಲೂಕಿನ ಹರದೂರುಪುರ ಲಕ್ಷ್ಮೀರಂಗನಾಥ ಸ್ವಾಮಿ ಮತ್ತು ಬಸವಾಪಟ್ಟಣದ ಶ್ರೀಲಕ್ಷ್ಮೀಕಾಂತೇಶ್ವರ ಸ್ವಾಮಿಯವರ ದಿವ್ಯ ರಥೋತ್ಸವ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ಜರುಗಿತು.

ಭಾನುವಾರ ಬೆಳಿಗ್ಗೆಯಿಂದಲೇ ವಿಜಯ ನಾಮಸಂವತ್ಸರದ ಮಾಘ ಶುದ್ಧ ರಥಸಪ್ತಮಿಯಂದು ಗೊರೂರು ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ವಿವಿಧ ಪೂಜಾ ಕಾರ್ಯಗಳು ಆರಂಭಗೊಂಡವು. ಮಧ್ಯಾಹ್ನ ಹೂವಿನ ಅಲಂಕಾರಗಳಿಂದ ಸಿದ್ಧಗೊಂಡಿದ್ದ ರಥದಲ್ಲಿ ದೇವರ ಉತ್ಸವ ಮೂರ್ತಿಯನ್ನು ಕೂರಿಸಿ ಹಲವು ಪೂಜಾ ಕಾರ್ಯಗಳನ್ನು ಕೈಗೊಂಡ ಬಳಿಕ ರಥದ ಹಿಂದಿನ ಮತ್ತು ಮುಂದಿನ ಚಕ್ರಗಳಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿದ ನಂತರ ಭಕ್ತರು ಸರದಿ ಸಾಲಿನಲ್ಲಿ ನಿಂತು ರಥವನ್ನು ಊರಿನ ಸುತ್ತ ಎಳೆದು ಭಕ್ತಿ ಪ್ರದರ್ಶಿಸಿದರು.

ರಥೋತ್ಸವದ ಜೊತೆ ಮಂಗಳ ವಾದ್ಯ, ಜಯಘೋಷ ವಿಪ್ರರಿಂದ ಮಂತ್ರ ಪಠಣ ನಡೆಯುತ್ತಿದ್ದವು. ರಥೋತ್ಸವ

» ನಾಲ್ಕನೇ ಪುಟದಲ್ಲಿ



## ಪ್ರತ್ಯೇಕ ಅಪಘಾತ : ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಚನ್ನರಾಯಪಟ್ಟಣ ಸಂಚಾರ ಹಾಗು ಜಾವಗಲ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು ಯುವಕನೊಬ್ಬ ಗಾಯಗೊಂಡಿರುವ ಘಟನೆ ನಡೆದಿದೆ.

ಅಪರಿಚಿತ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕಿನ ಶೆಟ್ಟಿಹಳ್ಳಿ ಸಮೀಪ ನಡೆದಿದೆ. ಬೆಂಗಳೂರಿನ ನಾಗರಬಾವಿ ನಿವಾಸಿ ಮಿಥುನ್ (21) ಮೃತಪಟ್ಟಿದ್ದಾನೆ. ನಗರದಲ್ಲಿ ಹಮ್ಮಿಕೊಂಡಿದ್ದ ರೋಟರಿ ಕಾರ್ಯಕ್ರಮಕ್ಕಾಗಿ ಬೈಕ್‌ನಲ್ಲಿ ಬಂದಿದ್ದ ಮಿಥುನ್ ಹಾಗು ರಾಜೇಶ್ ವಾಪಾಸ್ ಹೋಗುವಾಗ ಅವಘಡ ಸಂಭವಿಸಿದೆ. ಹಿಂದಿನಿಂದ ವೇಗವಾಗಿ ಬಂದ ಅಪರಿಚಿತ ಕಾರು ಡಿಕ್ಕಿಯಾಗಿ ಇಬ್ಬರೂ ರಸ್ತೆ ಮೇಲೆ ಬಿದ್ದಿದ್ದಾರೆ. ಚಾಲಕ ವಾಹನ ನಿಲ್ಲಿಸದೆ ತೆರಳಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ಮಿಥುನ್ ಸ್ಥಳದಲ್ಲೇ ಮೃತಪಟ್ಟರೆ, ಗಾಯಾಳು ರಾಜೇಶ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚನ್ನರಾಯಪಟ್ಟಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ರಸ್ತೆಗೆ ಅಡ್ಡಲಾಗಿ ಬಂದ ಹಸುವಿಗೆ ಬೈಕ್ ಡಿಕ್ಕಿಯಾಗಿ ವ್ಯಕ್ತಿ ಮೃತಪಟ್ಟಿರುವ ಘಟನೆ ಬೇಲೂರು ತಾಲ್ಲೂಕಿನ ಹಂದ್ರಾಳು ಗ್ರಾಮದಲ್ಲಿ ನಡೆದಿದೆ.

ಅರೇಹಳ್ಳಿ ಹೋಬಳಿ ನಾಗೇನಹಳ್ಳಿ ಗ್ರಾಮದ ಯೋಗೇಶ್ (51) ಮೃತರು. ಶನಿವಾರ ಸಂಜೆ 4ರ ಬೈಕ್‌ನಲ್ಲಿ ಹೋಗುತ್ತಿದ್ದಾಗ ಏಕಾಏಕಿ ರಸ್ತೆಗೆ ಹಸು ಅಡ್ಡ ಬಂದಿದೆ. ಬೈಕ್ ನಿಯಂತ್ರಣಕ್ಕೆ ಸಿಗದೆ ಯೋಗೇಶ್ ಅವರು ಕೆಳಗೆ ಬಿದ್ದು ತೀವ್ರ ರಕ್ತಸ್ರಾವವಾಗಿ ಮೃತಪಟ್ಟಿದ್ದಾರೆ. ಜಾವಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಾಣಿಜ್ಯ ಬೆಳೆಗೆ ಕಾಯಕಲ್ಪದ ಸಂಕಲ್ಪ | ತೋಟಗಾರಿಕೆ ಇಲಾಖೆಯಿಂದ ತಯಾರಿ

# ಎರಡು ದಿನಗಳ ಆಲೂಗೆಡ್ಡೆ ಮೇಳಕ್ಕೆ ಇಂದು ಚಾಲನೆ

• ಪ್ರಜೋದಯ ವರದಿ

**ಹಾಸನ:** ನಗರದ ಹೊಸ ಬಸ್ ನಿಲ್ದಾಣ ಸಮೀಪದ ಹಾಸನಾಂಬ ಉದ್ಯಾನವನದಲ್ಲಿ ಜ.26 ಹಾಗು 27ರಂದು ರಾಜ್ಯ ಮಟ್ಟದ ಆಲೂಗೆಡ್ಡೆ ಹಾಗು ಸಿರಿ ಧಾನ್ಯ ಮೇಳಕ್ಕೆ ಕೃಷಿ-ತೋಟಗಾರಿಕೆ ಇಲಾಖೆಯಿಂದ ಭರ್ಜರಿ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಯ ಪ್ರಮುಖ ವಾಣಿಜ್ಯ ಬೆಳೆಯಾಗಿರುವ ಆಲೂಗೆಡ್ಡೆ ಇತ್ತೀಚಿನ ವರ್ಷಗಳಲ್ಲಿ ನೇಪಥ್ಯಕ್ಕೆ ಸರಿಯುತ್ತಿದೆ. 50 ಸಾವಿರ ಹೆಕ್ಟೇರ್‌ನಿಂದ 5 ಸಾವಿರ ಹೆಕ್ಟೇರ್‌ಗೆ ಇಳಿಕೆ ಕಂಡಿರುವ ಆಲೂಗೆಡ್ಡೆಯ ವೈಭವ ಪುನಃ ಸ್ಥಾಪಿಸಬೇಕೆಂದು ಪಣ ತೊಟ್ಟಿರುವ ತೋಟಗಾರಿಕೆ ಇಲಾಖೆ ಹಾಗು ಜಿಲ್ಲಾಡಳಿತ ಎರಡು ದಿನಗಳ ರಾಜ್ಯ ಮಟ್ಟದ ಆಲೂಗೆಡ್ಡೆ ಮೇಳ ಆಯೋಜಿಸಿದ್ದು, ದೇಶದ ವಿವಿಧ ರಾಜ್ಯಗಳ ವಿಜ್ಞಾನಿಗಳು, ಪ್ರಗತಿಪರ ರೈತರಿಂದ ಕಾರ್ಯಾಗಾರ ಹಮ್ಮಿಕೊಂಡಿದೆ.

ಜ.26ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ



ಕೃಷ್ಣಬೈರೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರು ಪ್ರದರ್ಶನ ಮಳಿಗೆಗಳ ಉದ್ಘಾಟಿಸಲಿದ್ದಾರೆ. ಸಂಸದ ಶ್ರೇಯಸ್ ಪಟೇಲ್ ಅವರು ಯಂತ್ರೋಪಕರಣ ಮಳಿಗೆಗಳ ಉದ್ಘಾಟಿಸಲಿದ್ದು, ಶಾಸಕ ಹೆಚ್.ಪಿ.ಸ್ವರೂಪ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ತೋಟಗಾರಿಕೆ ಇಲಾಖೆಯಿಂದ 66 ಮಳಿಗೆ ತೆರೆಯಲಾಗುತ್ತಿದ್ದು, ವಿವಿಧ ತಳಿಯ ಆಲೂಗೆಡ್ಡೆಗಳನ್ನು ರೈತರಿಗೆ ಪರಿಚಯಿಸಲಾಗುತ್ತಿದೆ. ಬಿತ್ತನೆಗಾಗಿ ಜಿಲ್ಲೆಯ ರೈತರು ಪಂಜಾಬ್‌ನ ಜಲಂಧರ್‌ನ ಆಲೂಗೆಡ್ಡೆಯನ್ನೇ ಅವಲಂಬಿಸಿದ್ದಾರೆ. ಶೀತ ವಾತಾವರಣದಲ್ಲಿ ಬೆಳೆಯುವ ಆಲೂಗೆಡ್ಡೆಗೆ ಜಲಂಧರ್ ಪ್ರಮುಖ ತಾಣವಾಗಿರುವುದು ಹೇಗೆ ಮತ್ತು ನಿರ್ವಹಣೆ ವಿಧಾನದ ಕುರಿತು ಅರಿವು ಮೂಡಿಸಲು ಅಲ್ಲಿನ ರೈತ ಮುಖಂಡರು ಹಾಗು ವರ್ತಕರು ಮೇಳದಲ್ಲಿ ಭಾಗವಹಿಸಲಿದ್ದಾರೆ. ಆಲೂಗೆಡ್ಡೆ ಬಿತ್ತನೆಯಲ್ಲಿ ತಂತ್ರಜ್ಞಾನ ಅಳವಡಿಕೆ, ಅಂಗಾಂಶ ಕೃಷಿ ಕುಡಿ ಕಾಂಡ, ಬೀಜೋತ್ಪಾದನೆ ಹಾಗು ಇಳುವರಿ ಹೆಚ್ಚಿಸುವ ವಿಧಾನಗಳ ಕುರಿತು ತಜ್ಞರು ಅರಿವು ಮೂಡಿಸಲಿದ್ದಾರೆ.

ಬೆಳಿಗ್ಗೆ ವೇದಿಕೆ ಕಾರ್ಯಕ್ರಮ ಮುಗಿದ ಬಳಿಕ ಮಧ್ಯಾಹ್ನ 2 ರಿಂದ ತಾಂತ್ರಿಕ ವಿಚಾರ ಗೋಷ್ಠಿ ಆರಂಭವಾಗಲಿದೆ. ಆಲೂಗೆಡ್ಡೆ ಬೆಳೆ ಹಾಗು ಬೀಜದ ಗೆಡ್ಡೆಗಳ ಉತ್ಪಾದನಾ ತಾಂತ್ರಿಕತೆ ಕುರಿತು ಬೆಂಗಳೂರು ತೋಟಗಾರಿಕೆ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಹೆಚ್.ಅಮರ ನಂಜುಂಡೇಶ್ವರ, ಸೋಮನಹಳ್ಳಿ ಕಾವಲು ತೋಟಗಾರಿಕೆ ವಿಸ್ತರಣಾ ಕೇಂದ್ರದ ಮುಖ್ಯಸ್ಥ ಡಾ.ಎಸ್.ಕೆ.ನಟರಾಜ, ಊಟಿ ಕೇಂದ್ರಿಯ ಆಲೂಗೆಡ್ಡೆ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ.ಪ್ರಿಯಾಂಕ ಮಹಾತ್ರೆ, ಉಪನ್ಯಾಸ ನೀಡುವರು. ಆಲೂಗೆಡ್ಡೆ ಬೆಳೆಯಲ್ಲಿ ಸಸ್ಯ ಸಂರಕ್ಷಣೆ ಕ್ರಮಗಳ ಕುರಿತು ಹಾಸನ ಕೃಷಿ ಸಂಶೋಧನಾ ಕೇಂದ್ರದ ಸಹ ಪ್ರಾಧ್ಯಾಪಕ ಡಾ.ವೈ.ಎಸ್.ಮಹೇಶ್, ಸಹಾಯಕ ಪ್ರಾಧ್ಯಾಪಕ ಡಾ.ಪ್ರಶಾಂತ್ ಮಾಹಿತಿ ಹಂಚಿಕೊಳ್ಳಲಿದ್ದಾರೆ. ಮಂಗಳವಾರ ಸಹ ಬೆಳೆ ಕುರಿತು ವಿಚಾರ ಗೋಷ್ಠಿ, ರೈತರು, ವಿಜ್ಞಾನಿಗಳು, ಬೀಜ ಉತ್ಪಾದಕರು ಹಾಗು ವರ್ತಕರೊಂದಿಗೆ ಸಂವಾದ ಏರ್ಪಡಿಸಲಾಗಿದೆ. ಮೇಳದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮವೂ ನಡೆಯಲಿದೆ. ಇದೇ ವೇಳೆ ಜಿಲ್ಲೆಯ 16 ಪ್ರಗತಿಪರ ರೈತರನ್ನು ಸನ್ಮಾನಿಸಲಾಗುತ್ತಿದೆ.

**ಕೃಷಿ ಇಲಾಖೆಯಿಂದ ಸಿರಿ ಧಾನ್ಯ ಮೇಳ**

ಬೆಂಗಳೂರಿನ ಅರಮನೆ ಮೈದಾನದಲ್ಲಿ ಫೆ.6 ರಿಂದ 8ರವರೆಗೆ ಅಂತರಾಷ್ಟ್ರೀಯ ಸಿರಿ ಧಾನ್ಯ ಮೇಳ ಆಯೋಜಿಸಿದ್ದು, ಪೂರ್ವಭಾವಿಯಾಗಿ ನಗರದಲ್ಲಿ ಜಿಲ್ಲಾ ಮಟ್ಟದ ಸಿರಿ ಧಾನ್ಯ ಮೇಳವನ್ನು ಜ.26ರಂದು ಕೃಷಿ ಇಲಾಖೆಯಿಂದ ಹಮ್ಮಿಕೊಳ್ಳಲಾಗಿದೆ. ಕೃಷಿ ಇಲಾಖೆಯಿಂದ 24 ಮಳಿಗೆ ತೆರೆಯಲಾಗಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ತೋಟಗಾರಿಕೆ ಇಲಾಖೆ, ಆಕಾಶವಾಣಿ, ಆಲೂಗೆಡ್ಡೆ ವರ್ತಕರ ಸಂಘ ಹಾಗು ವಿವಿಧ ರೈತ ಸಂಘಟನೆಗಳು ಈ ಕಾರ್ಯಕ್ರಮಕ್ಕೆ ಸಹಕಾರ ನೀಡಿವೆ.

## ರಾಜ್ಯದ ಎಂಟು ಸಾಧಕರಿಗೆ ಪದ್ಮಶ್ರೀ ಗೌರವ



• ಪ್ರಜೋದಯ ವರದಿ

**ಬೆಂಗಳೂರು:** ಪ್ರಸಕ್ತ ಸಾಲಿನ ಪದ್ಮಶ್ರೀ ಪ್ರಶಸ್ತಿ ಪ್ರಕಟವಾಗಿದ್ದು, ಕಲಾ ಕ್ಷೇತ್ರದಲ್ಲಿನ ಸೇವೆಗಾಗಿ ಶತಾವಧಾನಿ ಆರ್.ಗಣೇಶ್ ಪದ್ಮ ಭೂಷಣ ಪ್ರಶಸ್ತಿ ಪಡೆದಿದ್ದಾರೆ. ರಾಜ್ಯದ ಏಳು ಸಾಧಕರು ಪದ್ಮಶ್ರೀಗೆ ಭಾಜನರಾಗಿದ್ದಾರೆ.

ಅಂಕೇಗೌಡ, ಪ್ರಭಾಕರ ಕೋರೆ, ಸುಶೀಲಮ್ಮ, ಶಶಿಶೇಖರ ವೆಂಪತಿ, ಶುಭಾ ವೆಂಕಟೇಶ ಅಯ್ಯಂಗಾರ್, ಸುರೇಶ ಹನಗವಾಡಿ ಹಾಗು ಟಿ.ಟಿ.ಜಗನ್ನಾಥ ಸೇರಿ ಏಳು ಸಾಧಕರು ಈ ಸಾಲಿನ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಈ ಸಲ ರಾಜ್ಯಕ್ಕೆ ಒಂದು ಪದ್ಮ ಭೂಷಣ, 7 ಪದ್ಮಶ್ರೀ ಸೇರಿ ಒಟ್ಟು 8 ಪದ್ಮ ಪ್ರಶಸ್ತಿಗಳು ಬಂದಿವೆ. ಗಣರಾಜ್ಯೋತ್ಸವದ ಮುನ್ನಾ ದಿನವಾದ ಭಾನುವಾರ ಕೇಂದ್ರ ಗೃಹ ಸಚಿವಾಲಯ ಈ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರ ವಿವರ ನೀಡಿದೆ. ಮಂಡ್ಯ ಮೂಲದ ಪುಸ್ತಕ ಪ್ರೇಮಿ ಅಂಕೇಗೌಡ, ದಾವಣಗೆರೆಯ ವೈದ್ಯ ಡಾ|| ಸುರೇಶ್ ಹನಗವಾಡಿ ಹಾಗು ಬೆಂಗಳೂರಿನ ಸಮಾಜ ಸೇವಕಿ ಎಸ್.ಜಿ. ಸುಶೀಲಮ್ಮ ಅವರಿಗೆ ಪದ್ಮಶ್ರೀ ಪ್ರಶಸ್ತಿ ಲಭಿಸಿದೆ. ದೇಶದ 131 ಸಾಧಕರಿಗೆ ಪದ್ಮ ಪ್ರಶಸ್ತಿಗಳು ಸಂದಿವೆ.

# ಚುನಾವಣಾ ಆಯೋಗದ ಎಸ್‌ಐಆರ್-ಸುಪ್ರೀಂ ಪ್ರಶ್ನೆಗಳು



**ಚು**ನಾವಣಾ ಆಯೋಗ ಕೈಗೊಂಡಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕ್ರಮಗಳ ಕುರಿತು ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅನುಮಾನಗಳು, ಈಗಾಗಲೇ ಸಾರ್ವಜನಿಕ ವಲಯದಲ್ಲಿ ಮೂಡಿದ್ದ ಪ್ರಶ್ನೆಗಳಿಗೆ ಮತ್ತಷ್ಟು ಬಲ ನೀಡಿವೆ.

ಎಸ್‌ಐಆರ್ ಸಂಬಂಧಿಸಿ ಇತ್ತೀಚೆಗೆ ಸುಪ್ರೀಂ ಕೋರ್ಟ್‌ನಲ್ಲಿ ನಡೆದ ವಿಚಾರಣೆ ಅತ್ಯಂತ ಮಹತ್ವದ್ದಾಗಿದ್ದು, ಚುನಾವಣಾ ಆಯೋಗದ ಉದ್ದೇಶಗಳ ಶುದ್ಧಿಯ ಕುರಿತೆ ನ್ಯಾಯಪೀಠ ಗಂಭೀರ ಪ್ರಶ್ನೆಗಳನ್ನು ಎತ್ತಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ ಹಾಗೂ ನ್ಯಾಯಮೂರ್ತಿ ಜೋಯಿಮಲ್ಯ ಭಕ್ತಿ ಅವರನ್ನು ಒಳಗೊಂಡ ನ್ಯಾಯಪೀಠ ಕೇಳಿದ ಪ್ರಶ್ನೆಗಳು, ಈ ಪ್ರಕ್ರಿಯೆಯ ಹಿಂದೆ ಇರುವ ಉದ್ದೇಶಗಳ ಬಗ್ಗೆ ಸಂಶಯವನ್ನು ಗಟ್ಟಿಗೊಳಿಸಿವೆ.

ಎಸ್‌ಐಆರ್ ನಡೆಸುವ ಘೋಷಣೆ ಮಾಡಿದಾಗ ಚುನಾವಣಾ ಆಯೋಗದ ಮನಸ್ಸಿನಲ್ಲಿ ಏನಿತ್ತು. ಪೌರತ್ವವನ್ನು ನಿರ್ಧರಿಸುವುದೇ ನಿಮ್ಮ ಉದ್ದೇಶವಾಗಿತ್ತಾ? ಈ ತೀಕ್ಷ್ಣ ಮತ್ತು ಗಂಭೀರ ಪ್ರಶ್ನೆಯನ್ನು ಸುಪ್ರೀಂ ಕೋರ್ಟ್ ನೇರವಾಗಿ ಚುನಾವಣಾ ಆಯೋಗಕ್ಕೆ ಕೇಳಿದೆ. ಬಿಹಾರದಲ್ಲಿ ನಡೆದ ಎಸ್‌ಐಆರ್ ಹಿನ್ನೆಲೆಯಲ್ಲಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ವೇಳೆ, ಚುನಾವಣಾ ಆಯೋಗದ ಪರ ವಾದ ಮಂಡಿಸಿದ ವಕೀಲ ರಾಕೇಶ್ ದ್ವಿವೇದಿ ಅವರಿಗೆ ನ್ಯಾಯಪೀಠ ಈ ಪ್ರಶ್ನೆಯನ್ನು ಎತ್ತಿತು. ಅಕ್ರಮ ವಲಸೆ ಹಾಗೂ ನಗರೀಕರಣವೇ ಎಸ್‌ಐಆರ್‌ಗೆ ಕಾರಣ ಎಂದು ದ್ವಿವೇದಿ ಉತ್ತರಿಸಿ ದರು. ಆದರೆ, ಈ ಉತ್ತರಕ್ಕೆ ತೃಪ್ತರಾಗದಂತೆ ಕಂಡ ನ್ಯಾಯಮೂರ್ತಿಗಳು, 'ನೀವು ಎಸ್‌ಐಆರ್ ನಡೆಸಲು ತೀರ್ಮಾನಿಸಿದಾಗ ನಿಮ್ಮ ಉದ್ದೇಶ ಏನು? ಪೌರತ್ವವನ್ನು ನಿರ್ಧರಿಸುವುದು ನಿಮ್ಮ ಗುರಿಯಾಗಿತ್ತಾ' ಎಂದು ಮರುಮರು ಪ್ರಶ್ನಿಸಿದರು.

ಕಳೆದ 20 ವರ್ಷಗಳಲ್ಲಿ ಬಿಹಾರದಲ್ಲಿ ಅಕ್ರಮ ವಲಸೆ ಹೆಚ್ಚಾಗಿದೆ. ಜನಸಂಖ್ಯೆಯಲ್ಲಿ ಮಹತ್ವದ ಬದಲಾವಣೆ ಕಂಡುಬಂದಿದೆ. 2003ರ ಬಳಿಕ ಎಸ್‌ಐಆರ್ ನಡೆದಿಲ್ಲ ಮತ್ತು ಕೇವಲ ಸಮ್ಮರಿ ರಿವಿಷನ್ ಮಾತ್ರ ನಡೆದಿದೆ ಎಂದು ಚುನಾವಣಾ ಆಯೋಗ ಸಮರ್ಥಿಸಿಕೊಂಡಿತು.

ಆದರೆ ಈ ವಾದವನ್ನು ಸುಪ್ರೀಂಕೋರ್ಟ್ ಒಪ್ಪಲಿಲ್ಲ. 'ಹಾಗಾದರೆ ಈ ಕಾರಣಗಳನ್ನು ನೀವು ಎಸ್‌ಐಆರ್ ಘೋಷಿಸುವ ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಹೇಳಬೇಕಿತ್ತಲ್ಲ' ಎಂದು ನ್ಯಾಯಪೀಠ ಪ್ರಶ್ನಿಸಿತು. ಅದಕ್ಕೆ ಉತ್ತರವಾಗಿ, ಅಕ್ರಮ ವಲಸಿಗರನ್ನು ಪತ್ತೆ ಹಚ್ಚುವುದೇ ಎಸ್‌ಐಆರ್‌ನ ಉದ್ದೇಶವಾಗಿತ್ತು ಎಂದು ಹೇಳಬೇಕಿತ್ತು ಎಂದು ಆಯೋಗದ ವಕೀಲರು ಸಮಜಾಯಿಸಿ ನೀಡಿದರು. ಇದೇ ವೇಳೆ ನ್ಯಾಯಪೀಠ ಮತ್ತೊಂದು ಮಹತ್ವದ ವಿಚಾರವನ್ನು ಮುಂದಿಟ್ಟಿತು. ವಲಸೆ ಎಂಬುದರಲ್ಲಿ ಎರಡು ಪ್ರಕಾರ ಗಳಿವೆ ಅಂತರ್ರಾಜ್ಯ ವಲಸೆ ಮತ್ತು ಗಡಿದಾಟಿ ಬರುವ ಅಕ್ರಮ ವಲಸೆ. ಅಂತರ್ರಾಜ್ಯ ವಲಸೆ ಕಾನೂನು ಬದ್ಧ. ನೀವು ಯಾವ ವಲಸೆಯ ಬಗ್ಗೆ ಮಾತನಾಡುತ್ತಿದ್ದೀರಿ ಎಂಬುದನ್ನು ಸ್ಪಷ್ಟಪಡಿಸಿಲ್ಲ ಎಂದು ನ್ಯಾಯಮೂರ್ತಿ ಗಳು ಆಕ್ಷೇಪ ವ್ಯಕ್ತಪಡಿಸಿದರು.

ಈ ನಡುವೆ ಬಿಹಾರದಲ್ಲಿ 66 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ತೆರವುಗೊಳಿಸಲಾಗಿದೆ. ಆದರೆ ಅವರಲ್ಲಿ ಯಾರೂ ಸುಪ್ರೀಂಕೋರ್ಟ್ ಅಥವಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿಲ್ಲ, ಆಯೋಗವನ್ನೂ ಸಂಪರ್ಕಿಸಿಲ್ಲ ಎಂದು ಚುನಾವಣಾ ಆಯೋಗ ವಾದಿಸಿತು. ಇದಕ್ಕೂ ನ್ಯಾಯಪೀಠ ತೃಪ್ತಿಯಾಗಲಿಲ್ಲ.

ಎಸ್‌ಐಆರ್ ಘೋಷಿಸುವಾಗ ನಿಮ್ಮ ಮನಸ್ಸಿನಲ್ಲಿ ಏನಿತ್ತು ಎಂಬುದು ನಮಗೆ ಸ್ಪಷ್ಟವಾಗ ಬೇಕು. ಪೌರತ್ವ ನಿರ್ಧಾರ ನಿಮ್ಮ ಉದ್ದೇಶವಾಗಿತ್ತಾ ಎಂದು ನ್ಯಾಯಮೂರ್ತಿಗಳು ಮತ್ತೆ ಪ್ರಶ್ನಿಸಿದರು. ಚುನಾವಣಾ ಆಯೋಗದ ಅಧಿಕಾರ ಅನಿಯಂತ್ರಿತವಲ್ಲ. ಆಯೋಗದ ನಡೆ ಗಂಭೀರ ಪರಿಣಾಮಗಳಿಗೆ ಕಾರಣವಾಗಬಹುದೆಂದು ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ ಎಚ್ಚರಿಸಿದರು. ನ್ಯಾಯಮೂರ್ತಿ ಭಕ್ತಿ ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸಂವಿಧಾನದ ಸೆಕ್ಷನ್ 213ರ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಸ್ವತಂತ್ರ ಅಧಿಕಾರವಿದೆ ಎಂದು ವಕೀಲ ದ್ವಿವೇದಿ ಸಮರ್ಥಿಸಿಕೊಂಡರು. ಆದರೆ ನ್ಯಾಯಪೀಠ ಇದನ್ನು ಒಪ್ಪಲಿಲ್ಲ. ಸೆಕ್ಷನ್ 212ರ ಅಡಿಯಲ್ಲಿ ನಿಗದಿತ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿರುವಾಗ, ಸೆಕ್ಷನ್ 213ರ ಹೆಸರಿನಲ್ಲಿ ಆಯೋಗ ತನ್ನದೇ ನಿಯಮಗಳನ್ನು ರೂಪಿಸಿಕೊಳ್ಳಲು ಸಾಧ್ಯವೇ ಎಂದು ಪ್ರಶ್ನಿಸಿದರು. ಎಸ್‌ಐಆರ್ ಸಂಬಂಧಿಸಿದ ಫಾರ್ಮ್ ನಂಬರ್ 6ರಲ್ಲಿ ನಿಯಮಾನುಸಾರ ಏಳು ದಾಖಲೆಗಳೇ ಸಾಕಾಗಬೇಕಾಗಿದ್ದರೆ, ಚುನಾವಣಾ ಆಯೋಗ 11 ದಾಖಲೆಗಳನ್ನು ಕೇಳು ತ್ತಿದೆ. ದಾಖಲೆಗಳ ಸಂಖ್ಯೆಯನ್ನು ಅನಿಯಂತ್ರಿತವಾಗಿ ಹೆಚ್ಚಿಸುವ ಅಧಿಕಾರ ಆಯೋಗಕ್ಕೆ ಹೇಗೆ ಸಿಗುತ್ತದೆ ಎಂದು ನ್ಯಾಯಮೂರ್ತಿ ಭಕ್ತಿ ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಆಯೋಗದ ವಕೀಲರು ಸ್ವಲ್ಪ ಮೆತ್ತಗಾಗಿ, ಕಾನೂನು ಆಯೋಗಕ್ಕೆ ಕೆಲವು ರಿಯಾಯಿತಿಗಳನ್ನು ನೀಡುತ್ತದೆ, ಆದರೆ ಅದು ನಿರಂಕುಶವಾಗಿ ವರ್ತಿಸಲು ಅವಕಾಶ ನೀಡುವುದಿಲ್ಲ ಎಂದು ಒಪ್ಪಿಕೊಂಡರು.

ಮತದಾನ ಸಂವಿಧಾನಾತ್ಮಕ ಹಕ್ಕು. ಯಾವುದೇ ಪ್ರಕ್ರಿಯೆ ಸಂವಿಧಾನಕ್ಕೆ ವಿರುದ್ಧವಾಗಲು ಸಾಧ್ಯವಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸ್ಪಷ್ಟಪಡಿಸಿದರು. ಆಯೋಗದ ಈಗಿನ ವರ್ತನೆ ಜನರ ಬಗ್ಗೆ ಕಾಳಜಿ ಇಲ್ಲದಂತೆ ಕಾಣುತ್ತಿದೆ ಎಂದು ನ್ಯಾಯಮೂರ್ತಿ ಭಕ್ತಿ ಅಭಿಪ್ರಾಯಪಟ್ಟರು.

ಈ ಪ್ರಕರಣದ ವಿಚಾರಣೆಯನ್ನು ಜನವರಿ 28ಕ್ಕೆ ಮುಂದೂಡಲಾಗಿದೆ. ಇಲ್ಲಿಯವರೆಗೆ ಎಸ್‌ಐಆರ್ ಕುರಿತು ಸಾರ್ವಜನಿಕ ವಲಯದಲ್ಲಿ ಏನೆಲ್ಲಾ ಅನುಮಾನಗಳಿದ್ದವೋ, ಅವೆಲ್ಲಕ್ಕೂ ಸುಪ್ರೀಂ ಕೋರ್ಟ್ ವಿಚಾರಣೆ ಬಲ ನೀಡಿದೆ. ಪೌರತ್ವವನ್ನು ಸಾಬೀತುಪಡಿಸುವ ಹೊಣೆಗಾರಿಕೆ ಚುನಾವಣಾ ಆಯೋಗದದಲ್ಲ. ಅದು ಕೇಂದ್ರ ಸರ್ಕಾರದ ಗೃಹ ಖಾತೆಯ ವ್ಯಾಪ್ತಿಗೆ ಬರುತ್ತದೆ. ಇದೇ ಕಾರಣಕ್ಕಾಗಿ ಕೇಂದ್ರ ಸರ್ಕಾರ 2019ರಲ್ಲಿ ಎನ್‌ಆರ್‌ಸಿ ನಿರ್ಧಾರ ಕೈಗೊಂಡಿತ್ತು. ಆ ನಿರ್ಧಾರದ ಹಿಂದೆ ಕರಾಳ ಉದ್ದೇಶಗಳಿವೆ ಎಂಬ ಆರೋಪಗಳು ಕೇಳಿಬಂದಿದ್ದು, ದೇಶವ್ಯಾಪಿ ತೀವ್ರ ಪ್ರತಿಭಟನೆಗಳು ನಡೆದವು. ಅಂತಿಮವಾಗಿ ಕೇಂದ್ರ ಸರ್ಕಾರ ಎನ್‌ಆರ್‌ಸಿ ಪ್ರಕ್ರಿಯೆ ಯಿಂದ ಹಿಂದೆ ಸರಿಯಿತು.

ಇದೀಗ ಅದೇ ಪ್ರಕ್ರಿಯೆಯನ್ನು ಎಸ್‌ಐಆರ್ ಹೆಸರಿನಲ್ಲಿ ಚುನಾವಣಾ ಆಯೋಗದ ಮೂಲಕ ಮುಂದುವರಿಸಲು ಯತ್ನಿಸಲಾಗುತ್ತಿದೆಯೇ ಎಂಬ ಪ್ರಶ್ನೆ ಉದ್ಭವಿಸಿದೆ. ಫಾರ್ಮ್ 6ರಲ್ಲಿ ದಾಖಲೆಗಳ ಸಂಖ್ಯೆಯನ್ನು ಏಳರಿಂದ 11ಕ್ಕೆ ಹೆಚ್ಚಿಸಿರುವುದು, ಹೊಸ ಅನುಮಾನಾಸ್ಪದ ಮಾನದಂಡಗಳನ್ನು ಸೇರಿಸಿರುವುದು ಈ ಅನುಮಾನಕ್ಕೆ ಕಾರಣವಾಗಿದೆ.

ಆರಕ್ಕಿಂತ ಹೆಚ್ಚು ಮಕ್ಕಳು ಒಂದೇ ತಂದೆಯ ಹೆಸರನ್ನು ಸೂಚಿಸಿದರೆ ಸಂಶಯಾಸ್ಪದ ಮತದಾರರು, ತಾಯಿಮಕ್ಕಳ ವಯಸ್ಸಿನ ಅಂತರ 15 ವರ್ಷಕ್ಕಿಂತ ಕಡಿಮೆ ಇದ್ದರೆ ಅನುಮಾನ, ಅಜ್ಜಿ-ಮೊಮ್ಮಕ್ಕಳ ವಯಸ್ಸಿನ ಅಂತರ 40 ವರ್ಷಕ್ಕಿಂತ ಕಡಿಮೆ ಇದ್ದರೂ ಸಂಶಯ, ತಂದೆಯ ಹೆಸರಿನಲ್ಲಿ ಸಣ್ಣ ಸ್ಪೆಲ್ಲಿಂಗ್ ದೋಷ ಇದ್ದರೂ ಮತದಾರರನ್ನು ಅನುಮಾನಾಸ್ಪದರೆಂದು ಪರಿಗಣಿಸುವ ನಿಯಮಗಳನ್ನು ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಜಾರಿಗೆ ತರಲಾಗಿದೆ. ಈ ಬಗ್ಗೆ ದಿ ಹಿಂದೂ ಪತ್ರಿಕೆ ವಿಸ್ತೃತ ವರದಿ ಪ್ರಕಟಿಸಿದೆ.

ಒಟ್ಟಿನಲ್ಲಿ ಎಸ್‌ಐಆರ್ ಕುರಿತು ದೇಶದ ಪ್ರಜ್ಞಾವಂತ ನಾಗರಿಕರು ಎತ್ತಿದ್ದ ತಕರಾರುಗಳು ನಿಜವೆಂದು ತೋರುತ್ತಿವೆ. ಈ ಪ್ರಕ್ರಿಯೆಯ ಮೂಲ ಉದ್ದೇಶ ಪೌರತ್ವವನ್ನು ಪರಿಶೀಲಿಸುವುದು ಮತ್ತು ಅಂತಿಮವಾಗಿ ಪೌರತ್ವ ನಿರಾಕರಣೆಗೆ ದಾರಿ ಮಾಡಿಕೊಡುವುದೇ ಎಂಬ ಆತಂಕ ಈಗ ಸುಪ್ರೀಂ ಪ್ರಶ್ನೆಗಳ ಮೂಲಕ ಮತ್ತಷ್ಟು ಬಲಗೊಳ್ಳುತ್ತಿವೆ.

**-ಅಲೀಲ್ ಅಕ್ಬರ್**

## ಗುರುಗಳು

**ಅ**ವತ್ತು ಗುರುಗಳ ಬಳಿಗೆ ಹೋಗಿದ್ದೆ ಗುರುಗಳೇ ಪ್ರಶ್ನೆಗಳು ಸಾವಿರ ಇವೆ, ಎಲ್ಲದಕ್ಕೂ ನಿಮ್ಮಲ್ಲಿ ಉತ್ತರ ಕೇಳುವುದಕ್ಕೆ ಸರಿಯಾಗುವುದಿಲ್ಲ, ಹಾಗಾಗಿ ತುಂಬಾ ಕಾಡುತ್ತಿರುವ ಪ್ರಶ್ನೆಗಳನ್ನು ನಿಮ್ಮ ಮುಂದೆ ಇಡ್ತೇನೆ. ದಯವಿಟ್ಟು ಉತ್ತರ ಕೊಡಿ ಜೀವನದಲ್ಲಿ ಗೆಲುವು ಸಾಧಿಸಬೇಕು ಅದ್ಭುತವನ್ನು ಪಡೆದುಕೊಳ್ಳಬೇಕು ಯಶಸ್ವಿ ವ್ಯಕ್ತಿಯನ್ನಿಸ್ಕೊಳ್ಳಬೇಕು ಇದೆಲ್ಲ ಸಾಧ್ಯ ಆಗೋದಕ್ಕೆ ಇನ್ನು ಎಷ್ಟು ವರ್ಷ ಹೀಗೆ ಪ್ರಯತ್ನ ಪಡಬೇಕು? ಗುರುಗಳು ಹೇಳಿದರು ''ನೋಡು ನಿನ್ನ ಈ ಆಲೋಚನೆಗಳೆಲ್ಲ ಸರಿ ಆದರೆ ನೀನು ಎಷ್ಟು ನಿನ್ನ ಬದುಕಿನ ಬಗ್ಗೆ ಜವಾಬ್ದಾರಿ ಇಟ್ಟುಕೊಂಡಿದ್ದೀಯಾ? ಒಂದು ಕ್ಷಣವನ್ನು ವ್ಯರ್ಥ ಮಾಡಿದೆ ಪ್ರಯತ್ನ ಪಡ್ತಾ ಇದ್ದೀಯಾ? ನಿನಗೊಂದು ಕೆಲಸ ವನ್ನು ವಹಿಸಿದಾಗ ಆ ಕೆಲಸವನ್ನು ನಿಧಾನ ವಾಗಿ ಮುಗಿಸ್ತಾ ಇನ್ನೊಂದು ಕೆಲಸ ಕಡೆಗೆ ಹೆಜ್ಜೆ ಇಡ್ತೀಯಾ? ಕ್ಷಣದಲ್ಲಾಗುವುದನ್ನ ದಿನಗಳ ವರೆಗೆ ಎಳೆದು ಮುಂದುವರಿಸುತ್ತಿರುವವನು ನೀನು. ಹೀಗಾದಾಗ ಗೆಲುವು ಹೇಗೆ ಸಿಗೋದಕ್ಕೆ ಸಾಧ್ಯ. ಆ ಕ್ಷಣದ ಕೆಲಸವನ್ನ ಆ ಕ್ಷಣದಲ್ಲೇ ನಿಭಾಯಿಸು. ಒಂದು ದಿನ ನಿನಗೆ ಸಿಕ್ಕಿರುವ ಸಮಯ ದಲ್ಲಿ ಹೆಚ್ಚಿನ ಕ್ಷಣವನ್ನು ಶ್ರಮವಹಿಸಿ ದುಡಿದು ಗೆಲುವಿನ ನಿರೀಕ್ಷೆ ಯಿಲ್ಲದೆ ಏಕಮುಖವಾಗಿ ಪ್ರಾಮಾಣಿಕ ಪ್ರಯತ್ನವನ್ನು ಪಟ್ಟರೆ ಎಲ್ಲಾ ಗೆಲುವುಗಳು ನಿನ್ನನ್ನು ಹುಡುಕಿ ಬರುತ್ತವೆ. ಅವರಿವರ ತಪ್ಪು ಗಳಿಗೆ ಕೈ ತೋರಿಸುತ್ತಾ ಅವರ ತಪ್ಪಿನಿಂದ ನಿನ್ನ ಜೀವನ ಹೀಗಾಯ್ತು ಅಂದು ಕೊಳ್ಳು ವುದಕ್ಕಿಂತ ನಿನ್ನ ತಪ್ಪುಗಳನ್ನು ತಿದ್ದಿ ಕೊಂಡು ಮುನ್ನಡೆದು ಬಿಡು ಗೆಲುವು ನಿನ್ನದಾಗಿರುತ್ತದೆ. ಗುರುಗಳ ಮಾತನ್ನು ಒಪ್ಪಿಕೊಂಡು ಹೆಜ್ಜೆ ಇಟ್ಟಿದ್ದೇನೆ.

# ಇಂದು ಗಣರಾಜ್ಯೋತ್ಸವ

**ನ**ಮ್ಮ ದೇಶ ಭಾರತ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿನ ಪ್ರಜೆಗಳಾದ ನಾವು ಭಾರತೀಯರು. ನಾವೆಲ್ಲರೂ ಒಂದೆ ಎಂಬ ಐಕ್ಯಮಂತ್ರವನ್ನು ಸಾರುವ ಜನ ಗಣ ಮನ ಮತ್ತು ವಂದೇ ಮಾತರಂ ಐಕ್ಯಗಾನಗಳು ನಮ್ಮದಾಗಿವೆ. ಕೇಸರಿ, ಬಿಳಿ, ಹಸಿರು ಬಣ್ಣಗಳ ನಡುವೆ ಚಕ್ರವಿರುವ ತ್ರಿವರ್ಣ ಧ್ವಜದ ಸಂಕೇತವನ್ನು ನಾಲ್ಕು ಮುಖಗಳ ಸಿಂಹದ ರಾಷ್ಟ್ರಮುದ್ರೆಯನ್ನು, ಅಶೋಕ ಚಕ್ರದ ಲಾಂಛನವನ್ನು ನಾವು ಹೊಂದಿದ್ದೇವೆ. ಇಂದು ನಾವು ಕಾಣುತ್ತಿರುವ ಅಖಂಡ ಭಾರತದ ನಿರ್ಮಾಣ ಇಂದು ನೆನ್ನೆಯದಲ್ಲ. ನಮ್ಮ ದೇಶದ ಚರಿತ್ರೆಯನ್ನು ಪ್ರಾಚೀನ, ಮಧ್ಯ, ಆಧುನಿಕ ಕಾಲಘಟ್ಟವನ್ನಾಗಿ ವಿಂಗಡಿಸಿ ಅಧ್ಯಯನ ಮಾಡಿದಾಗ ಅಖಂಡ ಭಾರತ ಯಾವ ರೀತಿ ಯಲ್ಲಿ ತುಂಡು ತುಂಡಾಗಿತ್ತು, ಮತ್ತು ಅದನ್ನು ಹೇಗೆ ಅಖಂಡವನ್ನಾಗಿಸಲಾಯಿತು ಎಂಬುದನ್ನು ತಿಳಿಯಬಹುದಾಗಿದೆ.

ಗಣರಾಜ್ಯೋತ್ಸವವು ಪ್ರಮುಖ ರಾಷ್ಟ್ರೀಯ ಹಬ್ಬವಾಗಿದೆ. ಎಲ್ಲಾ ಭಾರತೀಯರಿಗೂ ಸಂತಸ ತರುವ ಹಬ್ಬ ಗಣರಾಜ್ಯೋತ್ಸವ. ಭಾರತ ಒಂದು ಒಕ್ಕೂಟ ವ್ಯವಸ್ಥೆಯ ಗಣರಾಜ್ಯವಾಗಿದೆ. 1950 ರ ಜನವರಿ 26 ರಂದು ಭಾರತ ಒಂದು ಗಣರಾಜ್ಯವೆಂದು ಘೋಷಿಸಿ, ವಿಶಿಷ್ಟ, ವಿಭಿನ್ನ ಮತ್ತು ವೈವಿಧ್ಯಮಯವಾದ ಬೃಹತ್ ಸಂವಿಧಾನವನ್ನು ಜಾರಿಗೊಳಿಸಿದ ದಿನವಾಗಿದೆ. ಏಕೆಂದರೆ 1929 ರಲ್ಲಿ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಭಾರತದ ಪೂರ್ಣ ಸ್ವರಾಜ್ಯ ಘೋಷಣೆಯಾದ ನಂತರ 1930 ರ ಜನವರಿ 26 ರಂದು ಸ್ವಾತಂತ್ರ್ಯ ದಿನವನ್ನಾಗಿ ಸ್ವಾತಂತ್ರ್ಯ ಹೋರಾಟಗಾರರು ಆಚರಿಸಿದ ಚರಿತ್ರಾಹರ್ ದಿನದ ಸವಿನೆನಪಿಗಾಗಿ ರಾಷ್ಟ್ರದ ತುಂಬೆಲ್ಲ ಗಣ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ರಾಷ್ಟ್ರದ ಆಡಳಿತವನ್ನು ಯಾವ ಯಾವ ನಿಯಮಾವಳಿ ಗಳ ಪ್ರಕಾರ, ಹೇಗೆ ನಡೆಸಬೇಕೆಂಬ ವಿಧಾನವನ್ನು ಒಳಗೊಂಡ ಗ್ರಂಥವೇ ಸಂವಿಧಾನ. ಒಬ್ಬ ಮನುಷ್ಯನಿಗೆ ಶಿರಸ್ಸು ಎಷ್ಟು ಮುಖ್ಯವೊ, ಅಷ್ಟೇ ಮುಖ್ಯ ಒಂದು ರಾಷ್ಟ್ರಕ್ಕೆ ಸಂವಿಧಾನ ಎಂದು ಹೇಳಲಾಗುತ್ತದೆ. ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಡಾ ಬಾಬು ರಾಜೇಂದ್ರ ಪ್ರಸಾದ್ ಹಾಗೂ ಬಾಬಾಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಕರಡು ರಚನಾ ಸಮಿತಿ ಅಧ್ಯಕ್ಷರಾಗಿದ್ದರು.

ಸಂವಿಧಾನವು ನಮ್ಮ ಭಾರತವನ್ನು ಸರ್ವತಂತ್ರ ಸ್ವತಂತ್ರ, ಪ್ರಜಾಸತ್ತಾತ್ಮಕ, ಜಾತ್ಯಾತೀತ, ಸಾರ್ವಭೌಮ ರಾಷ್ಟ್ರವಾಗಿ ಪರಿಗಣಿಸಿದೆ. ನಮ್ಮ ಸಂವಿಧಾನವು ದೇಶದ ಪ್ರಜೆಗಳಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಮೂಲಭೂತ ಹಕ್ಕಗಳನ್ನು ನೀಡಿದೆ. ಸರ್ಕಾರದ ಕಾರ್ಯ ವಿಧಾನಗಳ ಬಗ್ಗೆ ನೀತಿಯನ್ನು ರೂಪಿಸಿದೆ. ನಿರ್ದೇಶಾತ್ಮಕ ತತ್ವಗಳನ್ನು ನೀಡಿದೆ ತನ್ನ ರಾಷ್ಟ್ರೀಯ ಹಾಗೂ ವಿದೇ ಶಾಂಗ ನೀತಿಗಳನ್ನು ರೂಪಿಸಿ ಕಾರ್ಯಗತಗೊಳಿಸುವ ಅಧಿಕಾರ ಭಾರತ ಸರ್ಕಾರಕ್ಕೆ ನೀಡಿದೆ. ವಿಶ್ವದ ಎಲ್ಲಾ ರಾಷ್ಟ್ರಗಳೊಡನೆ ಸ್ನೇಹ ಸಂಬಂಧ, ಸಾಂಸ್ಕೃತಿಕ, ಆರ್ಥಿಕ, ವಾಣಿಜ್ಯ-ವ್ಯವಹಾರ ಸಂಬಂಧಗಳನ್ನು ಬೆಳೆಸಲು ನಮ್ಮ ಸಂವಿಧಾನವು ಭಾರತಕ್ಕೆ ಅವಕಾಶ ಕಲ್ಪಿಸಿದೆ. ಆದ್ದರಿಂದಲೇ ನಮ್ಮ ಸಂವಿಧಾನವಂತೂ ವಿಶ್ವ ಮಾನ್ಯವಾಗಿದೆ. ಸಂವಿಧಾನವು ಪ್ರಜೆಗಳಿಗೆ ಪರಮಾಧಿಕಾರವನ್ನು ನೀಡಿದೆ. ಭಾರತದಲ್ಲಿ ಪ್ರತಿ ಐದು ವರ್ಷಗಳಿಗೊಮ್ಮೆ ಸಾರ್ವತ್ರಿಕ ಮಹಾ ಚುನಾವಣೆಗಳನ್ನು ನಡೆಸುವುದರೊಂದಿಗೆ ಹದಿನೆಂಟು ವರ್ಷ ತುಂಬಿದ ಎಲ್ಲಾ ಜನರೂ ಮತ ನೀಡುವ ಮೂಲಕ ತಮ್ಮ ಅಧಿಕಾರವನ್ನು ಚಲಾಯಿಸಬಹುದಾಗಿದೆ.

ಸಮಾನತೆಯ ಹಕ್ಕು, ಸ್ವಾತಂತ್ರ್ಯದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯದ ಹಕ್ಕು, ಶೋಷಣೆಯ ವಿರುದ್ಧರ ಹಕ್ಕು, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು ಮತ್ತು ಸಂವಿಧಾನದ ಬದ್ಧ ಪರಿಹಾರ ಕ್ರಮಗಳ ಹಕ್ಕು ಹೀಗೆ ಆರು ಮೂಲಭೂತ ಹಕ್ಕುಗಳನ್ನು ಸಂವಿಧಾನವು ಮಾನ್ಯ ಮಾಡಿದೆ. ಭಾರತವು ಅಸ್ಸಾಮಿ, ಕನ್ನಡ, ತೆಲುಗು, ತಮಿಳು, ಬಂಗಾಳಿ, ಹಿಂದಿ ಮೊದಲಾದ ಇಪ್ಪತ್ತೆರಡು ಭಾಷೆಗಳನ್ನು ದೇಶದ ಸಂವಿಧಾನ ಬದ್ಧ ಪ್ರಮುಖ ಭಾಷೆಗಳೆಂದು ಪರಿಗಣಿಸಿದೆ. ಗಣರಾಜ್ಯ ದಿನ ವನ್ನು ದೆಹಲಿಯಲ್ಲಿ ಅದ್ದೂರಿಯಾಗಿ ಆಚರಿಸ ಲಾಗುತ್ತದೆ. ಈ ಉತ್ಸವವನ್ನು ವೀಕ್ಷಿಸಲು ಇಡೀ ದೇಶವೇ ಹಾತೊರೆಯುತ್ತದೆ. ರಾಷ್ಟ್ರಪತಿಯವರು ಧ್ವಜಾರೋಹಣ ಮಾಡುತ್ತಾರೆ. ಯೋಧರಿಗೆ ಪ್ರಥಮ ಗೌರವ ಸಲ್ಲುತ್ತದೆ. ಗಣ ರಾಜ್ಯೋತ್ಸವ ಪರೇಡ್‌ನಲ್ಲಿ ಸೈನ್ಯವನ್ನನುಸರಿಸಿ ಬರುವ ಯುದ್ಧದ ಟ್ಯಾಂಕರ್‌ಗಳು, ಶಸ್ತ್ರಾಸ್ತ್ರಗಳನ್ನು ಹಿಡಿದು ಬರುವವಾಹನಗಳು, ವಿವಿಧ ರಾಜ್ಯಗಳ ಸಂಸ್ಕೃತಿ ಮತ್ತು ಕಲೆಗಳನ್ನು ಪರಿಚಯಿಸುವ ಸ್ತಬ್ಧ ಚಿತ್ರಗಳು (ಟ್ಯಾಬ್ಲೋ) ಮೊದಲಾದವು ದೇಶದ ಕೀರ್ತಿಯನ್ನು ಸಾರುತ್ತವೆ. ಪರೇಡ್‌ನಲ್ಲಿ ರಾಷ್ಟ್ರಾಧ್ಯಕ್ಷರಿಗೆ ಸೆಲ್ಯೂಟ್ ಸಲ್ಲಿಸಲಾ ಗುತ್ತದೆ. ಈ ದಿನದಂದು ಯೋಧರ ಸೇವೆ ಯನ್ನು ಸ್ಮರಿಸಿ, ಕಲೆ- ಸಂಸ್ಕೃತಿಗಳಲ್ಲಿ ಸೇವೆ ಸಲ್ಲಿಸಿದ ವರಿಗೆ ಪ್ರಶಸ್ತಿ ಪುರಸ್ಕಾರಗಳನ್ನು ನೀಡಲಾಗುತ್ತದೆ.

ಅದೇ ರೀತಿ ರಾಷ್ಟ್ರದ ಎಲ್ಲಾ ಶಾಲಾ ಕಾಲೇಜು ಗಳಲ್ಲಿ, ಕಛೇರಿಗಳಲ್ಲಿ ಧ್ವಜಾರೋಹಣದ ಮೂಲಕ ಗಣರಾಜ್ಯೋತ್ಸವ ಆಚರಿಸಲಾಗು ತ್ತದೆ. ದೇಶದ ಸಾಧನೆಯ ಬಗ್ಗೆ ಭಾಷಣ ಗಳನ್ನು ಮಾಡಲಾಗುತ್ತದೆ. ರಾಷ್ಟ್ರದ ಏಕತೆ ಮತ್ತು ವೈವಿಧ್ಯತೆ ಯನ್ನು ಪ್ರದರ್ಶಿಸುವ ಕಲಾ ನೃತ್ಯಗಳು ಪ್ರದರ್ಶಿತವಾಗುತ್ತವೆ.

2026ರ ಗಣರಾಜ್ಯೋತ್ಸವದ ವಿಷಯವು ಭಾರತದ ದೀರ್ಘಕಾಲೀನ ರಾಷ್ಟ್ರೀಯ ದೃಷ್ಟಿ ಕೋನವಾದ ವಿಕ್ಸಿತ್ ಭಾರತ (ಅಭಿವೃದ್ಧಿ ಹೊಂದಿದ ಭಾರತ) ಮತ್ತು ಭಾರತ್-ಲೋಕತಂತ್ರ ಕಿ ಮಾತೃಕಾ (ಭಾರತ-ಪ್ರಜಾಪ್ರಭುತ್ವದ ತಾಯಿ)ಗಳನ್ನು ಪ್ರತಿಧ್ವನಿಸುತ್ತಲೇ ಇದೆ. ಈ ವಿಷಯಗಳು 2047ರ ವೇಳೆಗೆ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವ ಭಾರತದ ಬದ್ಧತೆಯನ್ನು ಒತ್ತಿ ಹೇಳುತ್ತವೆ. ಪ್ರಾಚೀನ ಕಾಲದಿಂದಲೂ ಆಳವಾಗಿ ಬೇರೂರಿರುವ ಪ್ರಜಾಪ್ರಭುತ್ವ ಸಂಪ್ರದಾಯಗಳನ್ನು ಪುನರುಚ್ಚರಿಸುತ್ತವೆ. ಈ ವಿಷಯಗಳ ಚೈತನ್ಯವನ್ನು ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸಚಿವಾಲಯಗಳು ಪ್ರಸ್ತುತ ಪಡಿಸಿದ ಸ್ತಬ್ಧ ಚಿತ್ರಗಳ ಮೂಲಕ ಸ್ಪಷ್ಟವಾಗಿ ಪ್ರದರ್ಶಿಸ ಲಾಗುತ್ತಿದೆ. ಇದು ದೇಶದ ಆಡಳಿತ ಸುಧಾರಣಗಳು, ಸಾಂಸ್ಕೃತಿಕ ಪರಂಪರೆ, ತಾಂತ್ರಿಕ ಪ್ರಗತಿ ಮತ್ತು ಸಮಗ್ರ ಬೆಳವಣಿಗೆಯನ್ನು ಎತ್ತಿ ತೋರಿಸುತ್ತದೆ.

ದೇಶದ ಎಪ್ಪತ್ತೇಳನೇ ಗಣರಾಜ್ಯೋತ್ಸವ ಸಂದರ್ಭದಲ್ಲಿ ಭಾರತದ ಪ್ರಗತಿಯನ್ನು ಅವ ಲೋಕಿಸಬೇಕಿದೆ. ವಿಜ್ಞಾನ ಮತ್ತು ತಂತ್ರಜ್ಞಾನ, ವೈದ್ಯಕೀಯ, ಖಗೋಳ ಕ್ಷೇತ್ರದಲ್ಲಿ ಅಭೂತ ಪೂರ್ವ ಸಾಧನೆಯನ್ನು ಮಾಡಿದೆ. ವೈಮಾನಿಕ ಕ್ಷೇತ್ರದಲ್ಲಿಯೂ ಅದ್ವಿತೀಯ ಸಾಧನೆಯನ್ನು ಮಾಡಿದೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ರಂಗಗಳಲ್ಲಿಯೂ ಪ್ರಗತಿಪರ ಯೋಜನೆಗಳನ್ನು ಜಾರಿಗೆ ತಂದು ಯಶಸ್ಸನ್ನು ಸಾಧಿಸಿದೆ.

ಅಭಿವೃದ್ಧಿಪರ ವಿದೇಶಾಂಗ ನೀತಿಗಳನ್ನು ಅನುಸರಿಸಿ ಸೌಹಾರ್ದಯುತ ಬಾಂಧವ್ಯವನ್ನು ಹೊಂದಿದೆ. ಆದರೆ ಆಧುನಿಕ ಯುಗದ ಇಪ್ಪತ್ತೊಂದನೇ ಶತಮಾನವು ಸ್ಪರ್ಧಾತ್ಮಕವಾಗಿದ್ದು ಪರಿಹರಿಸಬೇಕಾದ ಸಮಸ್ಯೆ ಮತ್ತು ಸವಾಲುಗಳು ಸಾಕಷ್ಟಿವೆ. ಸಂವಿಧಾನವು ನಮಗೆ ಹಕ್ಕು ಗಳನ್ನು ನೀಡಿರುವಂತೆ, ಕರ್ತವ್ಯಗಳನ್ನು ತಿಳಿಸಿದೆ. ಭಾರತದ ಜವಾಬ್ದಾರಿಯುತ ಪ್ರಜೆಗಳಾಗಿ ಕರ್ತವ್ಯಗಳನ್ನು ನಿರ್ವಹಿಸುವುದು ನಮ್ಮ ಜವಾಬ್ದಾರಿಯೇ ಆಗಿದೆ. ಅವುಗಳನ್ನು ಪಾಲಿಸೋಣ. ನಾವು ಭಾರತೀಯರು. ನಾವೆಲ್ಲರೂ ಒಂದೇ ಎಂಬ ಐಕ್ಯತಾ ಭಾವದೊಂದಿಗೆ ರಾಷ್ಟ್ರದ ಏಳಿಗೆಗೆ ಮತ್ತು ಅಭಿವೃದ್ಧಿಗೆ ಶ್ರಮಿಸೋಣ. ಜಾಗತಿಕ ಭದ್ರತೆ ಮತ್ತು ವಿಶ್ವಶಾಂತಿಯ ಸಂದೇಶವನ್ನು ಸಾರೋಣ. ಎಲ್ಲರಿಗೂ ಭಾರತ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

**-ಕೆ.ಎನ್.ಚಿದಾನಂದ, ಹಾಸನ**




# ಊರು ತೇರು ಹಳೆಯ ನೆನಪುಗಳು ನೂರು



**ಹೇ**ಮಾವತಿ ನದಿ ಗೊರೂರು ಬಳಿ ಹಾಸನ ಮತ್ತು ಅರಕಲಗೂಡು ತಾಲ್ಲೂಕನ್ನು ಸೀಮಾ ರೇಖೆಯಾಗಿ ಬೇರ್ಪಡಿಸಿದೆ. ಗೊರೂರು ಬಳಿ ಸೇತುವೆ ಕಟ್ಟುವ ಮೊದಲು ಯೋಗಾ ನರಸಿಂಹ ಸ್ವಾಮಿ ದೇವಸ್ಥಾನದ ಬಳಿ ಹಾಯಿಗಡವಿದ್ದು ಹಳ್ಳಿಗರು ಇಲ್ಲಿಂದಲೇ ಗೊರೂರಿಗೆ ಬಂದು ಹೋಗುತ್ತಿದ್ದರು. ಹೊಳೆ ತುಂಬಿದಾಗ ಹರಿಗೋಲು ಸಂಪರ್ಕ ಸಾಧನವಾಗುತ್ತಿತ್ತು. ಈ ಹಾಯಿಗಡ ಬಂಡೆಗಳಿಂದ ತುಂಬಿದ್ದು ಆಳ ಕಡಿಮೆ ಇರುತ್ತಿತ್ತಾಗಿ ಇದು ಬೇಸಿಗೆಯ ಸ್ನಾನ ಘಟ್ಟವೂ ಆಗಿತ್ತು. ನದಿಯಲ್ಲಿ ಈಜುವವರು ಚಿಕ್ಕನಕಲ್ಲಿನಲ್ಲಿ ಪ್ರಾರಂಭಿಸಿ ದೊಡ್ಡನಕಲ್ಲಿನಲ್ಲಿ ಕಲಿತು ಮಟ್ಟೆಕಲ್ ಮಡುವಿನಲ್ಲಿ ಈಜುವಂತಾದಾಗ ಪರಿಣಿತ ಎನ್ನಿಸಿಕೊಳ್ಳುತ್ತಿದ್ದರು. ಮಡುವಿನ ಪಕ್ಕದ ತಿರುವಿನಲ್ಲಿ ಸೋಪಾನದಿಂದ ಕೆಳಕ್ಕೆ ಮರಳು ಸಂಗ್ರಹವಾಗುತ್ತಿತ್ತು. ಈ ಹಾಯ್ಗಡದಲ್ಲಿ ಸೋಪಾನ ಕಟ್ಟೆ ಆಗಿ ಸೇತುವೆಯಾದ ಮೇಲೆ ಇಲ್ಲಿ ಹರಿಗೋಲು ಬಳಕೆ ನಿಂತು ಹೋಯಿತು. ಇಲ್ಲೀಗ ಹೇಮಾವತಿ ನದಿ ಮಧ್ಯೆ ಚಿಕ್ಕ ಗುಡಿ ಕಟ್ಟಿ ಅಲ್ಲಿಗೆ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಹೊಸದಾಗಿ ಈಜು ಕಲಿಯುವವರು ಎಮ್ಮೆ ಗುಂಡಿ ಎಂದು ಕರೆಯುತ್ತಿದ್ದ ಈ ಜಾಗದಲ್ಲಿಯೇ. ಆಗ ಹೇಮಾವತಿ ದಂಡೆಯು ಶವಗಳನ್ನು ಹೂಳುವ ರುದ್ರ ಭೂಮಿಯಾಗಿ ಬಳಕೆಯಾಗುತ್ತಿತ್ತು. ಗ್ರಾಮಕ್ಕೆ ಕುಡಿಯುವ ನೀರೆತ್ತುವ ಪಂಪ್ ಹೌಸ್ ಇಲ್ಲಿಯೇ ಇದೆ. ಯೋಗನರಸಿಂಹಸ್ವಾಮಿ ದೇವಸ್ಥಾನ ಮುಂದೆ ಎತ್ತರವಾಗಿ ಬೆಳೆದ ಮರಗಳು ಇಂದಿಗೂ ನೆರಳು ನೀಡುತ್ತಿವೆ.

ನದಿ ದಂಡೆಗೂ ಗ್ರಾಮಠಾಣಕ್ಕೂ ನಡುವೆ ತೋಟ ಗದ್ದೆಗಳಿವೆ. ಅದಕ್ಕೆ ನೀರಿನ ಆಸರೆಯಗಚಿ ನದಿಗೆ ಕಟ್ಟಿದ್ದ ಚಂಗ್ರವಳ್ಳಿ ನಾಲೆ. ಈಗ ಇದನ್ನು ಹೇಮಾವತಿ ಎಡದಂಡೆ ನಾಲೆಗೆ ಜೋಡಿಸಿದೆ. ಈ ನಾಲೆ ಗೊರೂರು ಗ್ರಾಮಠಾಣ ದಾಟುವಾಗ ಕೋಟೆ ಪೇಟೆ ಎಂದು ಇಬ್ಭಾಗಿಸುತ್ತದೆ. ಊರಿನ ಜಮೀನು ಕೆಳಗೆ ನೀರಾವರಿ ಮೇಲಕ್ಕೆ ಖುಷ್ಕಿ ಭೂಮಿಯನ್ನಾಗಿ ವಿಭಜಿಸಿದೆ. 6-5- 1568ರ ಚಂಗ್ರವಳ್ಳಿ ನಾಲೆಯ ಶಾಸನವು ಗೊರಊರ ಕಟ್ಟೆ (ಮಣ್ಣೇರಿ) ವೊಡೆದು ಖಿಲವಾಗಿ ಯಿರಲಾಗಿ ಎರಕೃಷ್ಣಪನಾಯಕರ ಮಗ ವೆಂಕಟಾದ್ರಿ ಜೀರ್ಣೋದ್ಧಾರ ಮಾಡಿಸಿದ್ದಾಗಿ ಹೇಳಿದೆ. ಯೋಗನರಸಿಂಹಸ್ವಾಮಿ ದೇವಸ್ಥಾನದಿಂದ ಕೋಟೆ ಪೇಟೆ ಬೀದಿಗಳ ಸಂಪರ್ಕಕ್ಕಾಗಿ ಗದ್ದೆಗಳ ಮಧ್ಯೆ ರಸ್ತೆ ಮಾಡಲಾಗಿದೆ. ಈಗ ದೇವಸ್ಥಾನ ಅಭಿವೃದ್ಧಿ ಪಡಿಸಲು ಸುತ್ತಲ ಗೋಡೆ ಕಟ್ಟಡ ಒಡೆಯಲಾಗಿದೆ.

ಊರಿನಲ್ಲಿ ಒಂದು ಐತಿಹಾಸಿಕ ಕೋಟೆ ಇತ್ತು. ಈಗ ಕೋಟೆ ಅವಶೇಷ ಏನೂ ಉಳಿದಿಲ್ಲ. ಕ್ರಿ.ಶ.1780ರಲ್ಲಿ ಕೊಡಗಿನ ಲಿಂಗರಾಜೇಂದ್ರ ರಾಜನು ಮರಣಹೊಂದಿದ ನಂತರ ಆತನ ಚಿಕ್ಕಮಗ ರಾಜ್ಯಾಡಳಿತ ನಡೆಸಲಾರನೆಂದು ತಿಳಿದ ಹೈದರಾಲಿ ಕುಯುಕ್ತಿಯಿಂದ ರಾಜರ ಕುಟುಂಬವನ್ನು ಕರೆತಂದು ಗೊರೂರಿನ ಕೋಟೆಯಲ್ಲಿ ಬಂಧಿಸಿದ್ದನೆಂದೂ ನಂತರ 1792ರಲ್ಲಿ ಹೈದರಾಲಿಯ ಮಗ ಟಿಪ್ಪುಸುಲ್ತಾನನು ಗೊರೂರು ಕೋಟೆಯಿಂದ ಮಡಿಕೇರಿ ರಾಜ ಕುಟುಂಬವನ್ನು ಪಿರಿಯಾಪಟ್ಟಣಕ್ಕೆ ವರ್ಗಾಯಿಸಿದನೆಂದು ಕೃಷ್ಣಯ್ಯನವರ ಮಡಿಕೇರಿ ಇತಿಹಾಸದಿಂದ ತಿಳಿಯಬಹುದು. 1575ರಲ್ಲಿ ಅರಕಲಗೂಡು ಕೃಷ್ಣಪ್ಪನಾಯಕನ ಅಧೀನಕ್ಕೆ ಗೊರೂರು ಒಳಪಟ್ಟಿತ್ತು. ಕೃಷ್ಣಪ್ಪನಾಯಕನು ಗೊರೂರಿನ ಶ್ರೀ ಯೋಗಾನರಸಿಂಹಸ್ವಾಮಿ ವಿಗ್ರಹವನ್ನು ಪೀಠದಲ್ಲಿ ಪ್ರತಿಷ್ಠಾಪಿಸಿ ಗರ್ಭ ಗುಡಿಯನ್ನು ಮತ್ತು ಸುತ್ತ ಕಲ್ಲಿನ ಗೋಡೆಯನ್ನು ನಿರ್ಮಿಸಿದನೆಂದು ಉಲ್ಲೇಖವಿದೆ.

ಕೋಟೆಯ ಈಶಾನ್ಯ ಬದಿಯಲ್ಲಿ ಎರಡು ಈಶ್ವರ ದೇವಸ್ಥಾನಗಳು ಇವೆ. ಈ ದೇವಾಲಯವು ಹೊಯ್ಸಳರ 1ನೇ ನರಸಿಂಹ ಕಾಲದಲ್ಲಿ 2-3-1167ರಲ್ಲಿ ಶತರುದ್ರಿಯಪುರ ಗೊರವೂರಲ್ಲಿ ಸುರಿಗೆಯ ವಿಜಯಾದಿತ್ಯ ಹೆಗ್ಗಡೆ ತ್ರಿಕೂಟ ಲಿಂಗ ಪ್ರತಿಷ್ಠೆ ಮಾಡಿಸಿದ್ದಾಗಿ ಶಾಸನವು ತಿಳಿಸುತ್ತದೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಮನೆಯ ಪಕ್ಕದಲ್ಲೇ ಪರವಾಸು ದೇವರ ದೇವಸ್ಥಾನವಿದೆ. ಈ ಗುಡಿಗೆ ಹೊಂದಿಕೊಂಡು ತೇರಿನ ಹಂಚಿನ ಮನೆ ಇತ್ತು. ಈಗ ಇದರ ಪಕ್ಕ ಹಳೆಯ ತೇರು ಶಿಥಿಲವಾಗಿ ನಿಂತಿದೆ. ಹೊಸ ತೇರಿಗೆ ಎತ್ತರದ ಮನೆ ಕಟ್ಟಲಾಗಿದೆ. ಇದಕ್ಕೆ ಹೊಂದಿಕೊಂಡಂತೆ ತೇರಿನ ಮೇಲಕ್ಕೆ ಉತ್ಸವ ಮೂರ್ತಿಯನ್ನು ಏರಿಸಲು ಕಟ್ಟಿಸಿದ ಮಂಟಪವಿದೆ. ಇಲ್ಲೊಂದು ಇತಿಹಾಸದ ಕೊಂಡಿಯಾಗಿ ಪೂರ್ಣಯ್ಯನ ಛತ್ರ ಅದರ ಪಕ್ಕ ಪುರಾತನ ದೇವಾಲಯವಿತ್ತು. ಇಲ್ಲಿಯೇ ಸಹಕಾರ ಸಂಘದ ಕಲ್ಲು ಕಟ್ಟಡ ಇದೆ. ಅದರ ಹಿಂದೆ ಶೃಂಗಾರ ತೋಟವಿತ್ತು. ಇಲ್ಲಿ ಹೂಗಳನ್ನು ಬೆಳಸಿ ದೇವರಿಗೆ ಅರ್ಪಿಸಲಾಗುತ್ತಿತ್ತಂತೆ. ಇಲ್ಲಿ ಈಗ ಜೆಎಸ್‌ಎಸ್ ಬೀಜ ಸಂಸ್ಕರಣ ಘಟಕದ ಕಟ್ಟಡವಿದೆ. ತೇರು ಮನೆಗೆ ಸ್ವಲ್ಪ ಮುಂದೆ ಕೋಟೆಯ ಬಾಗಿಲು ಇತ್ತು. ಅದರೊಳಗೆ ಪ್ರವೇಶಿಸಿ ಕೋಟೆಯೊಳಗೆ ಹೋಗಲು ಬಹಳ ಇಕ್ಕಟ್ಟಾದ ಕೊಂಡಿ ಬಿಡಲಾಗಿ ತ್ತೆಂದೂ ಒಂದು ಗಾಡಿಯೂ ಕಷ್ಟದಿಂದಲೇ ಒಳಗೆ ಹೋಗಬೇಕಾಗಿತ್ತೆಂದೂ ಗೊರೂರು ಸೋಮಶೇಖರ್ ತಮ್ಮ ಗೊರೂರು ನೆನಪುಗಳು ಕೃತಿಯಲ್ಲಿ ಹೇಳುತ್ತಾರೆ. ಈಗ ಅಲ್ಲೆಲ್ಲಾ ಕೋಟೆ ಇತ್ತು ಎಂದು ನಂಬಲಾಗದಷ್ಟು ಬಯಲಾಗಿದೆ.

ಕೋಟೆ ಬಾಗಿಲಿನ ಸಮೀಪದಲ್ಲೇ ಆಂಜನೇಯನ ಗುಡಿ ಇದೆ. ಈ ಮಾರಮ್ಮ ಹನುಮಂತ ಗುಡಿಗೆ ಎದುರು ಬಲಿ ಕಂಬಗಳಿವೆ. ಇಲ್ಲಿ ಮಾರಿ ಜಾತ್ರೆ ಮಾಡಿ ಪ್ರಾಣಿಗಳನ್ನು ಬಲಿ ಕೊಡುತ್ತಿದ್ದರು. ಮುಂದೆ ಸ್ವಾತಂತ್ರ್ಯ ಚಳು ವಳಿಯ ಕಾಲಕ್ಕೆ ಈ ಪದ್ಧತಿಯನ್ನು ನಿಲ್ಲಿಸಲಾಯಿತು. ಈ ಗುಡಿಗಳ ಎದುರಿಗೆ ಸ್ವಲ್ಪ ದೂರದಲ್ಲೇ ಒಂದು ಭಾರಿ ಅರಳಿ ಮರವಿದ್ದು ಅದಕ್ಕೆ ಕಟ್ಟೆ ಕಟ್ಟಿದ್ದಾರೆ. ಅದರ ಸಮೀಪದಲ್ಲೇ ಒಂದು ದೊಡ್ಡ ಕಲ್ಯಾಣಿ ಇತ್ತಂತೆ. ಅಲ್ಲೇ ಗೊರೂರಿನ ಚರಿತ್ರೆಯ ಭಾಗವಾಗಿ ಹಳೆಯ ಕಾಲದ ಜುಮ್ಮಾ ಮಸೀದಿ ಇದೆ. ಈಗ ಇದು ಅಭಿವೃದ್ಧಿಯಾಗಿದೆ. ಇಲ್ಲೇ ಗ್ರಾಮೀಣ ಸಂತೆ ಕೃಷಿ ಉತ್ಪನ್ನ ಮಾರುಕಟ್ಟೆ ಇದೆ. ಆದರೆ ಸಂತೆ ಅಲ್ಲೇ ಬಸ್ ಸ್ಟ್ಯಾಂಡ್ ಪಕ್ಕವೇ ನಡೆಯುತ್ತಿದೆ. ಅರಳಿಮರದ ಪಕ್ಕದಲ್ಲಿ ಗ್ರಾಮಠಾಣದಿಂದ ಗೋಮಾಳಕ್ಕೆ ದನಕರುಗಳು ಮೇಯಲು ಹೋಗಿ ಬರುವ ತುರುಮಂದೆ ಇತ್ತು. ಈ ಗೋಮಾಳಕ್ಕೆ ಹೋಗುವ ದಾರಿಯ ಪಕ್ಕದಲ್ಲಿ ಕೋಟೆಯ ಅವಶೇಷ ಕೋಟೆಯ ಸುತ್ತ ಕಂದಕದ ಗುರುತು ಸಹ ಕಾಣಬಹುದಿತ್ತು. ಈಗ ಏನೂ ಇಲ್ಲ. ನದಿಯ ಆಚೆ ಬದಿಯಲ್ಲಿ ಸೇತುವೆಯ ಪಕ್ಕ ಆಂಜನೇಯನ ಗುಡಿ ಇದೆ. ಇಲ್ಲಿ ವರ್ಷಕ್ಕೊಮ್ಮೆ ಕತ್ತರಿಘಟ್ಟ ಜಾತ್ರೆ ನಡೆಯುತ್ತದೆ. ಗೊರೂರು ಬಳಿ 1937ರಲ್ಲಿ ಹೇಮಾವತಿ ನದಿಗೆ ಸೇತುವೆಯಾದ ನಂತರ ಅರಕಲಗೂಡು ಹಾಸನ ರಸ್ತೆಯನ್ನು ಈ ಸೇತುವೆಯ ನೇರಕ್ಕೆ ನಿರ್ಮಿಸಲಾಯಿತು. ಈಗ ಅದರ ಪಕ್ಕ ಹೊಸ ಸೇತುವೆ ನಿರ್ಮಿಸಲಾಗಿದೆ. ಹಾಸನ ಅರಕಲಗೂಡು ಮುಖ್ಯ ರಸ್ತೆ ಗ್ರಾಮಠಾಣಕ್ಕೆ ಅರ್ಧ ಕಿ.ಮೀ. ದೂರದಲ್ಲೇ ಇತ್ತು. ಅದಕ್ಕೂ ಊರಿಗೂ ನಾಲೆಯ ಬದಿಯಲ್ಲೇ ಸಂಪರ್ಕ ರಸ್ತೆ ಇತ್ತು. ಅವುಗಳು ಕೂಡುವ ಜಾಗದಲ್ಲಿ ಸೇತುವೆ ಕಟ್ಟುವಾಗ ಪ್ರಾರಂಭವಾದ ಲೋಕೋಪಯೋಗಿ ಇಲಾಖೆ ಐ.ಬಿ.ಇತ್ತು. ಅದಕ್ಕೆ ಪಕ್ಕದಲ್ಲಿ ಮಾಧ್ಯಮಿಕ ಶಾಲೆ ಇದರ ಪಕ್ಕದಲ್ಲೇ ಆಸ್ಪತ್ರೆ ಇದೆ. ಹಳೇ ಊರ ಮುಂದೆ ಗ್ರಾಮ ಪಂಚಾ ಯಿತಿ ಕಟ್ಟಡ ಇತ್ತು. ಅದೀಗ ಬಳಕೆಯಾಗದೆ ನಾಶವಾ ಗುತ್ತಿದೆ. ಅದರ ಪಕ್ಕ ಹಾಲು ಉತ್ಪಾದಕರ ಸಹಕಾರ ಸಂಘದ ಕಟ್ಟಡ ಚಾಲ್ತಿ ಯಲ್ಲಿದೆ. ಈಗ ಹಾಸನ ಅರಕಲಗೂಡು ರಸ್ತೆಯಲ್ಲಿ ಹಳೇ ಊರಿನ ದಾರಿಯ ಪ್ರವೇಶ ದಲ್ಲಿ ಹೊಸದಾಗಿ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಿಸಲಾಗಿದೆ. ತೇರಿನ ಮನೆಗೆ ಹೊಂದಿ ಕೊಂಡಂತೆ ಇದ್ದ ಗ್ರಾಮೋದ್ಯೋಗ ಭವನ ಹೈಸ್ಕೂಲು ಆಗಿ ನಂತರ ಎ.ಎನ್.ವಿ. ಪ್ರಥಮ ದರ್ಜೆ ಸ್ಥಾಪನೆಯಾಗಿ ಈಗ ಕಾಲೇಜು ಊರಿಂದ ಮೇಲ್ಭಾಗ ಅರಳೀಕಟ್ಟೆ ಬಳಿ ಅಭಿವೃದ್ಧಿಯಾಗಿದೆ. ಈಗ ಹಳೆಯ ಕಟ್ಟಡ ಪಕ್ಕ ಮಂಜುನಾಥ ಕಲ್ಯಾಣ ಮಂಟಪವಾಗಿದೆ.

ಜಿಲ್ಲಾ ಕೇಂದ್ರ ಹಾಸನ ತಾಲ್ಲೂಕು ಕೇಂದ್ರ ಅರಕಲಗೂಡು ನಡುವೆ ಬಸ್ಸು ಸಂಚಾರ ಪ್ರಾರಂಭವಾಗಿ ಮುಂದೆ ಪ್ರಗತಿಯಾದಂತೆ ಮೈಸೂರು ಮಡಿಕೇರಿ ಮುಂತಾದ ಕಡೆಗೆ ವಿಸ್ತಾರಗೊಂಡಿತು. ಬಸ್ಸು ಐ.ಬಿ. ಬಳಿ ನಿಂತು ಪ್ರಯಾಣಿಕರನ್ನು ಇಳಿಸಿ ಏರಿಸಿಕೊಳ್ಳುತ್ತಿತ್ತು. ಕ್ರಮೇಣ ಖಾಸಗಿ ಬಸ್ಸುಗಳು ನಂಜುಂಡೇಶ್ವರ, ಸ್ಟಾರ್, ಎಸ್‌ಆರ್‌ಎಂಎಸ್ ಮೊದಲಾದವು ಬಂದು ಆ ಜಾಗ ಬಸ್ ನಿಲ್ದಾಣ ಎನಿಸಿಕೊಂಡಿತು. ಬಸ್ಸಿಗೆ ಕಾಯುವವರು ಅಲ್ಲಿದ್ದ ರಸ್ತೆಯ ಬದಿಯ ಸೇತುವೆ ಕಟ್ಟಿದಾಗ ನೆಟ್ಟಿದ್ದು ಚೆನ್ನಾಗಿ ಬೆಳೆದಿದ್ದ ಮಾವು ನೇರಳೆ ಅತ್ತಿ ಮರಗಳ ನೆರಳಿನಲ್ಲಿ ಕುಳಿತು ಹರಟುತ್ತಿದ್ದರು. ಹಳೆಯ ಬಸ್‌ಸ್ಟ್ಯಾಂಡ್‌ನಲ್ಲಿದ್ದ ಹೋಟೆಲ್ ಅಂಗಡಿ ಗಳನ್ನು ಎಮರ್‌ಜೆನ್ಸಿ ಕಾಲದಲ್ಲಿ ಕೆಡವಲಾ ಯಿತು. ಈಗ ಸ್ವಲ್ಪ ಮೇಲಕ್ಕೆ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಸ್ಟ್ಯಾಂಡ್ ಬಂದಿದೆ. ಪೊಲೀಸ್ ಸ್ಟೇಷನ್ ಅಲ್ಲಿಯೇ ಸ್ಥಾಪನೆಯಾಗಿದೆ. ಅಂಗಡಿಗಳು ರಸ್ತೆಯುದ್ದಕ್ಕೂ ಬೆಳೆದಿವೆ.

ಗೊರೂರಿನ ಪ್ರಾಥಮಿಕ ಶಾಲೆ ಮೊದಲು ಕೋಟೆಯ ಹಳೆಯ ಮನೆಯ ಕಟ್ಟಡದಲ್ಲಿದ್ದು ಮುಂದೆ ಪೇಟೆ ಮುಂದಿನ ಕಟ್ಟಡಕ್ಕೆ ಬದಲಾಯಿತು. ಅದು ಈಗ ನಾಶವಾಗಿದೆ. ಆಗ ಶನಿವಾರ ದಿನ ಸಂತೆ. ಸುತ್ತಲಿನ ಹಳ್ಳಿಯವರೂ ಸೇರಿ



ಜನರಿಗೆ ಅಂದು ಸಂತೆ ರಜಾ. ಸಂತೆ ಮೊದಲು ತೇರು ಮಂದೆಯ ಪಕ್ಕದಲ್ಲಿ ನಡೆ ಯುತ್ತಿತ್ತು. ಮುಂದೆ ಮಾಧ್ಯಮಿಕ ಶಾಲೆ ಮೈದಾನದ ಮೇಲ್ಭಾಗಕ್ಕೆ ಸ್ಥಳಾಂತರವಾಯಿತು. ಹೇಮಾವತಿ ಪ್ರಾಜೆಕ್ಟ್ ಪ್ರಾರಂಭಗೊಂಡು ಭಾನುವಾರದ ಸಂತೆ ಆಯಿತು. ಇಂದು ಭಾನುವಾರ ಸಂತೆ ರಥಸಪ್ತಮಿ ತೇರು ಒಟ್ಟಿಗೆ ಬಂದಿದೆ.

ಗೊರೂರಿನ ಮಾಧ್ಯಮಿಕ ಶಾಲೆಗೆ ಸುತ್ತ ಮುತ್ತಲಿನ ಗ್ರಾಮಗಳಲ್ಲದೆ ಅರಕಲಗೂಡು ಆಲೂರು ತಾಲ್ಲೂಕಿನವರು ನದಿ ದಾಟಿ ಬರುತ್ತಿದ್ದರು. ಮಳೆಗಾಲದಲ್ಲಿ ಹರಿಗೋಲಿಯಲ್ಲಿ ಬರುತ್ತಿದ್ದರು. ಮಳೆಗಾಲದಲ್ಲಿ ಪರ್ಯಾಯ ದ್ವೀಪಗಳಾಗುತ್ತಿದ್ದ ಪೊನ್ನಾಥಪುರ, ಹೇಮಾವತಿ ನದಿಯ ದಕ್ಷಿಣಕ್ಕಿದ್ದ ಹೆಬ್ಬಾಲೆ ಗ್ರಾಮದಿಂದ ಈ ಶಾಲೆಗೆ ಓದಲು ಬರುತ್ತಿದ್ದರು. ಸುಂದರ ಕಟ್ಟಡ ಇದ್ದು ಮರಗಿಡಗಳ ಮೆರಗಿನೊಂದಿಗೆ ಶಾಲೆ ಆಕರ್ಷಿಸುತ್ತಿತ್ತು. ಇದೇ ಕಾಲಕ್ಕೆ ಗೊರೂರು ಮಾದರಿ ಗ್ರಾಮ ಎಂದು ಕರೆಸಿಕೊಂಡಿತು. ಸ್ವಾತಂತ್ರ್ಯ ಚಳುವಳಿ ಪ್ರೇರಿತರಾಗಿ ಗ್ರಾಮೋದ್ಯೋಗ ಭವನ ಕಟ್ಟಿಕೊಂಡು ಸಣ್ಣ ಪುಟ್ಟ ಕೆಲಸಗಳನ್ನು ಮಾಡಲು ಊರವರು ಉಪಕ್ರಮಿಸಿದರು. ಸ್ವತಂತ್ರ ಬಂದ ಸನಿಹದಲ್ಲೇ ಗೊರೂರಿಗೆ ಕರ್ನಾಟಕದಲ್ಲೇ ಪ್ರಪ್ರಥಮ ಜಿಲ್ಲಾ ಬೋರ್ಡ್ ಹೈಸ್ಕೂಲ್ ಪ್ರಾರಂಭವಾಯಿತು. ಸರ್ಕಾರಿ ಕಟ್ಟಡವಿಲ್ಲದ ಹಳ್ಳಿಯೊಂದರಲ್ಲಿ ಪ್ರೌಢಶಾಲೆ ಪ್ರಾರಂಭವಾಗಲು ಸಾಧ್ಯವಾದುದು ಹೇಗೆಂದರೆ ಸ್ವಾತಂತ್ರ್ಯ ಪೂರ್ವ ದಿನಗಳಲ್ಲಿ ಗ್ರಾಮೋದ್ಯೋಗ ಭವನ ಚೆನ್ನಾಗಿ ನಡೆದು ನಿಂತುಹೋಗಿತ್ತು. ಅದರ ಖಾಲಿ ಕಟ್ಟಡ ಸಾಹುಕಾರ್ ಶೆಲ್ವಪಿಳ್ಳಯ್ಯಂಗಾರ್‌ರ ಉಸ್ತುವಾರಿಯಲ್ಲಿ ಇತ್ತು. ಇಲ್ಲೇ ಶಾಲೆ ಪ್ರಾರಂಭವಾಯಿತು. ಊರಿನ ಮುಖಂಡರು ಊರೂರು ಸುತ್ತಿ ಹಣ ಸಂಗ್ರಹಿಸಿ ಜಿಲ್ಲಾ ಬೋರ್ಡಿಗೆ ಕಟ್ಟಿದರು. ಸಾಹುಕಾರ್ ಕುಟುಂಬ ಶ್ರೀನಿವಾಸಮೂರ್ತಿ ಹೆಸರಿನಲ್ಲಿ ಸರ್ಕಾರಿ ದನಗಳ ಆಸ್ಪತ್ರೆಗೆ ಕಟ್ಟಡವನ್ನು ಕಟ್ಟಿಸಿಕೊಟ್ಟರು. ಈಗ ಇದು ಬಳಕೆಯಾಗದೆ ಅದರ ಪಕ್ಕದಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯ ನಿರ್ಮಿಸಲಾಗಿದೆ. ಊರಿನ ಗ್ರಾಮೋದ್ಯೋಗ ಕಟ್ಟಡದ ಪಕ್ಕದಲ್ಲೇ ಸರ್ಕಾರದ ಗ್ರಾಮ ಕೈಗಾರಿಕೆ ಯೋಜನೆಯಡಿ ಸೋಪಿನ ಕಾರ್ಖಾನೆ ಪ್ರಾರಂಭವಾಗಿ ಸ್ವಲ್ಪ ದಿನ ನಡೆದು ನಂತರ ಮುಚ್ಚಿ ಹೋಯಿತು. ನಾನು ಮೂರನೇ ತರಗತಿಯವರೆಗೆ ಯಾವ ಶಾಲೆಯಲ್ಲಿ ಓದಿದ್ದು ನೆನಪಿಲ್ಲ. 4ನೇ ತರಗತಿ ಓದಿದ್ದು ತೇರು ಮನೆಯ ಪಕ್ಕದ ಶಾಲೆಯಲ್ಲಿ. 5 ರಿಂದ 7 ಊರಿನ ಮಾದರಿ ಮಾಧ್ಯಮಿಕ ಶಾಲೆಯಲ್ಲಿ ಮತ್ತು ಪ್ರೌಢಶಾಲೆ ಈಗಿನ ಸರ್ಕಾರಿ ಶಾಲೆಯಲ್ಲಿ. ತೇರು ನೋಡಲು ಮತ್ತೇ ಊರಿಗೆ ಹೋಗಿ ಊರಿನ ದೋಸ್ತಾ ಯಾಕೂಬ್ ಸಿಕ್ಕಿ ಹೀಗೆ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾ ಮತ್ತೇ ಬಸ್ಸು ಹತ್ತಿ ಹಾಸನಕ್ಕೆ ವಾಪಸ್ಸಾದೆ.

**-ಗೊರೂರು ಅನಂತರಾಜು, ಹಾಸನ.**

## ಏನು ಹೇಳಿದ್ದಾರೆ?

**ರಾ**ತ್ರಿ ಹೊತ್ತು ಕುಡುಕನೊಬ್ಬ ತೂರಾಡುತ್ತ ರಸ್ತೆ ಮೇಲೆ ಹೋಗುತ್ತಿದ್ದ. ಎದುರಿಗೆ ಪೊಲೀಸನೊಬ್ಬ ಏನಯ್ಯಾ? ರಾತ್ರಿ ಇಷ್ಟು ಹೊತ್ತಿನಲ್ಲಿ ಸಿಕ್ಕಾಪಟ್ಟೆ ಕುಡಿದು ತೂರಾಡುತ್ತ ಹೋಗ್ತಾ ಇದ್ದೀಯಲ್ಲ... ಗಾಂಧೀಜಿ ಏನು ಹೇಳಿದ್ದಾರೆ ಗೊತ್ತಾ? ಎಂದು ಕೇಳಿದ. ಕುಡುಕ ಏನು ಹೇಳಿದ್ದಾರೆ? ಎಂದು ಕೇಳಿದ. ಪೊಲೀಸ್ ಕುಡಿತ ಮನುಷ್ಯನ ಮಹಾವೈರಿ ಅಂತ ಹೇಳಿದಾರೆ ಎಂದ. ಕುಡುಕ ಅದೇ ಗಾಂಧೀಜಿ ಏನು ಹೇಳಿದ್ದಾರೆ ಗೊತ್ತಾ? ಎಂದು ಕೇಳಿದ. ಪೊಲೀಸ್ ಕುತೂಹಲದಿಂದ ಏನು ಹೇಳಿದ್ದಾರೆ? ಎಂದು ಪ್ರಶ್ನಿಸಿದ ಕುಡುಕ, ವೈರಿಗಳನ್ನು ಪ್ರೀತಿಸು ಎಂದು ಹೇಳಿದ್ದಾರೆ ಎಂದ.



**-ಎಂ.ಕೆ.ಮಂಜುನಾಥ್**

## ಒಲೆಯ ಚಿಂತೆ

**ಶಾ**ಲೆಯಲ್ಲಿ ಪೋಷಕರ ಸಭೆ ಇತ್ತು. ಪ್ರತಿಯೊಬ್ಬ ಪೋಷಕರ ದೂರುಗಳನ್ನು ಕೇಳಿ ಹೆಡ್ ಮಿಸ್ ತಲೆ ಗರಂ ಆಗಿತ್ತು. ಕೆಲವರು ಫೀ ಕಟ್ಟದೇ ಇದ್ದರೂ, ಇಲ್ಲ, ರೀ. ನಮ್ಮನೆಯವರು ಫೀಸು ಕಟ್ಟಿದ್ದಾರೆಂದು ಹೆಡ್ ಮಿಸ್ ತಲೆ ತಿನ್ನುತ್ತಿದ್ದರು. ಆಗ ಅಂತವರಿಗೆಲ್ಲಾ ತರಾತುರಿಯಲ್ಲಿ ಸಾಕ್ಷಿ ತೆರೆದು ತೋರಿಸಬೇಕಿತ್ತು. ಮಧ್ಯಾಹ್ನ ಹೆಡ್ ಮಿಸ್ ವಾಶ್ ರೂಮಿಗೆ ಹೋಗಿ ತಮ್ಮ ಕ್ಯಾಬಿನ್ ಗೆ ಹೋಗುವಾಗ ಎರಡು ಹೆಜ್ಜೆ ಮುಂದೆ ಹೋದವರು ಮತ್ತೆ ಹಿಂದೆ ಬಂದು ನನ್ನತ್ತ ತಿರುಗಿ, ಸ್ವಲ್ಪ ಒಳಗೆ ಬರಿ ಅಂದರು. ಅಯ್ಯೋ ಮತ್ತೇನೊ ತಾಪತ್ರಯ ಕಾದಿದೆ ಅಂದುಕೊಂಡು ಒಳಗೆ ಹೋದೆ. ಝುಮುಕಿ ಹೊಸದಾ? ಎಷ್ಟಾಯ್ತು? ಅಂದರು. ನಿರಾಳತೆಯ ನಡುವೆಯೇ, 11 ಗ್ರಾಮ್ ಇದೆ ಮೇಡಂ, 76 ಸಾವಿರ ಆಯ್ತು ಅಂದೆ. ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗಳಿಗೆ ಬೇರೆ ಚಿಂತೆ ಅನ್ನೂ ಹಾಗೆ ನಮಗೆ ಒಲೆಯ ಚಿಂತೆ... ಇಬ್ಬರೂ ನಕ್ಕೆವು.

**-ಸುವರ್ಣಾ ಮಠ**

## ಮಾರ್ಕ್ಸ್ ಕಾರ್ಡ್

**ಕೆ**ಲಸದಿಂದ ಸುಸ್ತಾಗಿ ಮನೆಗೆ ಬಂದ ಪರಮೇಶಿ. ಕುರ್ಚಿ ಮೇಲೆ ಕುಳಿತು, ನೀರು ಕೊಡೆ ಅಂದ. ಪತ್ನಿ ಅವನಿಗೆ ನೀರು ಕೊಟ್ಟು ಕಾಫಿ ಮಾಡಲು ಒಳಗೆ ಹೋದಳು. ಅಷ್ಟರಲ್ಲಿ ಟೀಪಾಯ್ ಮೇಲೆ ಇಟ್ಟಿದ್ದ ಮಾರ್ಕ್ ಸ್ ಕಾರ್ಡ್ ಕಣ್ಣಿಗೆ ಬಿತ್ತು. ಪರಮೇಶಿ. ಕೆಂಡಾಮಂಡಲವಾದ, ನಾಚಿಕೆ ಆಗಲ್ವೇನೊ ನಿನಗೆ? ನಿನ್ನಂತವನು ನನ್ನ ಹೊಟ್ಟೇಲಿ ಹುಟ್ಟಿದ್ದಕ್ಕೆ ಅಸಹ್ಯ ಆಗ್ತಿದೆ ನಂಗೆ...ಎಂದ ಕೂಗಾಡಿದ ಒಳಗಿದ್ದ ಪತ್ನಿ, ರೀ... ಸ್ವಲ್ಪ ಕೇಳಿ ಇಲ್ಲಿ ಎಂದಾಗ, ಎಲ್ಲಾ ನೀ ಮುದ್ದು ಮಾಡಿದ್ದರ ಫಲ... ಸುಮ್ಮಿರು ನೀನು ಎನ್ನುತ್ತಾ ಮಗನ ಕಡೆ ತಿರುಗಿ, ನೂರಕ್ಕೆ ನಾಲಕ್ಕು, ಐದು ಮಾರ್ಕ್ಸ್ ತಗೊಂಡಿದ್ದೀಯಲ್ಲ? ಬಡವ ರಾಸ್ಕಲ್... ಮತ್ತೂ ರೇಗಿದ. ಪುನಃ ಪತ್ನಿ, ರೀ.. ಇಲ್ಲಿ ಸ್ವಲ್ಪ ಕೇಳಿ ಎಂದಳು. ನೀ ಸ್ವಲ್ಪ ಬಾಯಿ ಮುಚ್ಚಿಕೊಂಡು ಇರ್ತಿಯಾ? ಇವನಿಗೆ ನಾವು ಕೊಡೊ ಸವಲತ್ತು ಜಾಸ್ತಿ ಆಗಿದೆ... ಅದಕ್ಕೇ ಹೀಗೆ ಸಾಧನೆ ಮಾಡ್ತಾ ಇದ್ದಾನೆ... ಎಂದಿದ್ದೇ ತಡ ಆತನ ಪತ್ನಿ ಹೊರಗೆ ಬಂದು, ರೀ, ಬೆಳಿಗ್ಗೆ ನಿಮ್ಮ ಆಲ್ಮೇರಾ ಕ್ಲೀನ್ ಮಾಡುವಾಗ ಸಿಕ್ತು, ಅದು ನಿಮ್ದೇ ಕಣ್ರೀ ಮಾರ್ಕ್ಸ್ ಕಾರ್ಡು ಎಂದಳು.

**-ಅರವಿಂದ ಜಿ. ಜೋಷಿ**

## ಆರೋಗ್ಯದ ಗುಟ್ಟು

**ಅಂ**ದು ರಮೇಶನ ಮನೆಯಲ್ಲಿ ಮಡದಿಯಿಂದ ಪ್ರವಚನ ಸಾಗಿತ್ತು. ರೀ ನೀವು ದಿನಾ ಹೀಗೆ ಕುಡಿದು ಬಂದ್ರೆ, ನಿಮ್ಮ ಆರೋಗ್ಯ ಏನಾಗಬೇಡ? ಎಷ್ಟು ಹೇಳಿದ್ರೂ, ಸಂಜೆಯಷ್ಟೊತ್ತಿಗೆ ಎಲ್ಲಾ ಮರೆತು ಹೋಗುತ್ತೆ ಅಲ್ವಾ? ಏನಾದ್ರೂ ಹೆಚ್ಚು ಕಡಿಮೆ ಆದ್ರೆ, ಯಾರು ಬರ್ತಾರೆ ನಮ್ಮ ಸಹಾಯಕ್ಕೆ? ಅಂತೆಲ್ಲಾ ಅವಳು ಭಾಷಣ ಮಾಡುವಾಗ ಆತನ ಸ್ನೇಹಿತ ನಾಣಿ ಬಂದ. ಆತ ಬಹಳವೇ ಸಪೂರವಾಗಿ ಹೋಗಿದ್ದ. ಏನೊ ನಾಣಿ? ಹೀಗಾಗಿದ್ದೀಯ? ಯಾಕೆ? ಹುಷಾರಿಲ್ವೇನೊ? ಎಂದು ಈತ ವಿಚಾರಿಸಹತ್ತಿದ. ನಾಣಿ, ಹು ಕಣೋ, ಯಾಕೊ ಪದೇ ಪದೇ ಆರೋಗ್ಯ ಹದಗೆಡ್ತಾ ಇದೆ... ಎಂದು ಅವಲತ್ತುಕೊಂಡ. ರಮೇಶ, ನೀನು ಗುಂಡು ಹಾಕೋನೂ ಅಲ್ಲ. ಪಾಪ, ಟೀ-ಕಾಫಿ ಕುಡಿಯೋಕೇ ಹೆದರುತ್ತೀಯ.. ಎಂದಾಗ ನಾಣಿ, ಹೌದು ರಮೇಶ, ಅದಕ್ಕೇ ಆರೋಗ್ಯ ಹೀಗೆ ಅಂತ ಕಾಣುತ್ತೆ ಎಂದಾಗ ರಮೇಶ ಖುಷಿಯಾಗಿ ಹೆಂಡತಿ ಕಡೆ ತಿರುಗಿ, ನೋಡೆ. ಕುಡೀದೇ ಇದ್ರೂ, ಹೇಗಾಗಿದ್ದಾನೆ ನೋಡು ಎಂದ.

**-ಶಂಕರೇಗೌಡ ತುಂಬಕೆರೆ**

# ರಾಜಕೀಯಕ್ಕಾಗಿ ದೇಶವನ್ನು ಬೈಯುವುದಿಲ್ಲ: ಡಿ.ಕೆ.ಶಿ.

## ರಾಹುಲ್ ಗಾಂಧಿ ಹೇಳಿಕೆ ಬಗ್ಗೆ ಗೊತ್ತಿಲ್ಲ | ದೇಶ ಬಿಟ್ಟುಕೊಡಲು ಸಾಧ್ಯವಿಲ್ಲ

• ಪ್ರಜೋದಯ ವರದಿ

**ಬೆಂಗಳೂರು:** ವಿದೇಶದಲ್ಲಿ ಭಾರತದ ವಿರುದ್ಧ ಯಾರೂ ಮಾತನಾಡುವುದಿಲ್ಲ, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೇಶವೆಂಬ ಹಿರಿಮೆಯಿದೆ, ರಾಜಕೀಯಕ್ಕಾಗಿ ನಾನು ದೇಶವನ್ನು ಬೈಯುವುದಿಲ್ಲವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಹೇಳಿದರು.




ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆಯ ಶೃಂಗಸಭೆಯಲ್ಲಿ ಭಾಗವಹಿಸಿ ಹಿಂದಿರುಗಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದು ಜಗತ್ತು ಬೆಂಗಳೂರಿನ ಮೂಲಕ ಭಾರತವನ್ನು ನೋಡುತ್ತಿದೆ. ಭಾರತವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೇಶ. ಜನರು ಈ ದೇಶದ ಯುವಕರ ಮೇಲೆ ಹೆಚ್ಚಿನ ವಿಶ್ವಾಸ ಹೊಂದಿದ್ದಾರೆ. ವಿಶ್ವ ನಾಯಕರು ಬೆಂಗಳೂರಿನ ಮೂಲಕ ಭಾರತವನ್ನು ನೋಡುತ್ತಿದ್ದಾರೆ. ಈ ನಗರದಲ್ಲಿ ಫಾರ್ಚೂನ್ 500 ಕಂಪನಿಗಳ ಹೆಚ್ಚಿನ ಕಚೇರಿಗಳಿವೆಯೆಂದು ಹೇಳಿದರು.

ರಾಹುಲ್ ಗಾಂಧಿ ಭಾರತದ ಆರ್ಥಿಕತೆ ಸರಿ ಇಲ್ಲ ಎಂದು ಹೇಳುವಾಗ ನೀವು ಭಾರತವನ್ನು ಹೊಗಳಿದ್ದೀರಿ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿ, ರಾಹುಲ್ ಗಾಂಧಿ ಯಾವ ಸನ್ನಿವೇಶ ದಲ್ಲಿ ಯಾವ ಅರ್ಥದಲ್ಲಿ ಹೇಳಿಕೆ ನೀಡಿದ್ದಾರೆಂಬುದು ಗೊತ್ತಿಲ್ಲ. ಅವರು ದೇಶದ ವಿರುದ್ಧ ಹೇಳಿಕೆ ನೀಡಿಲ್ಲ. ಆಂತರಿಕ ವ್ಯವಸ್ಥೆಯ ಬಗ್ಗೆ ಹೇಳಿದ್ದಾರೆ. ರಾಜಕೀಯಕ್ಕೆ ನಾನು ಭಾರತವನ್ನು ಬೈಯಲು ಸಾಧ್ಯವಿಲ್ಲವೆಂದರು.

ನನಗೆ ಅಷ್ಟೋ ಇಷ್ಟೋ ರಾಜಕೀಯ ಅನುಭವ ಇದೆ. ಅದರ ಮೇಲೆ ಹೇಳಿದ್ದೇನೆ. ನಾನು ಯಾವುದೋ ದೇಶಕ್ಕೆ ಹೋಗಿ ನಮ್ಮ ದೇಶಕ್ಕೆ ಧಕ್ಕೆ ತರುವುದಕ್ಕೆ ಆಗುವುದಿಲ್ಲ. ನಾವು ನಮ್ಮ ದೇಶವನ್ನು ಬಿಟ್ಟು ಕೊಡಲು ಸಾಧ್ಯವಿಲ್ಲ. ಮೊದಲು ನಾವು ಭಾರತೀಯರು. ನಾನು ದೇಶವನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ಭಾರತದ ಅಭಿವೃದ್ಧಿಗೆ ನಮ್ಮೆಲ್ಲರ ಕೊಡುಗೆ ಇದೆ ಎಂದರು.

ಆಂಧ್ರಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಜಾರ್ಖಂಡ್ ಮತ್ತು ಅಸ್ಸಾಂ ಸೇರಿ ಹತ್ತು ಭಾರತೀಯ ರಾಜ್ಯಗಳ ಮುಖ್ಯಮಂತ್ರಿಗಳು ಹಲವಾರು ರಾಜ್ಯ ಸರ್ಕಾರಗಳ ಮುಖ್ಯಸ್ಥರು ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಎಲಾನ್ ಮಸ್ಕ್ ಮತ್ತು ದೊಡ್ಡ ಉದ್ಯಮಿಗಳು ಇದ್ದರು. ಸುಮಾರು 100 ಸಾರ್ವಜನಿಕ ಸಭೆಗಳು ನಡೆದವು ಮತ್ತು ಹೊಸ ನೀತಿಗಳನ್ನು ಚರ್ಚಿಸಲಾಯಿತು ಎಂದು ಶಿವಕುಮಾರ್ ಹೇಳಿದರು.

**ಹೊಸ ಒಪ್ಪಂದಕ್ಕೆ ಸಹಿ ಇಲ್ಲ**

ವಿದೇಶಿ ಹೂಡಿಕೆದಾರರು ಇಲ್ಲಿಗೆ ಬಂದು ಲಭ್ಯವಿರುವ ಸಂಪನ್ಮೂಲ, ಸಾಮರ್ಥ್ಯ, ಪರಿಸರ, ಶುದ್ಧ ಇಂಧನ, ಮಾಲಿನ್ಯ ಮಟ್ಟ, ಪ್ರತಿಭೆ ಲಭ್ಯತೆ, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೆಂಟರ್ ಅವಶ್ಯಕತೆಗಳನ್ನು ನೋಡಬೇಕೆಂದು ನಾವು ಬಯಸುತ್ತೇವೆ. ಆದ್ದರಿಂದ ನಾವು ಅಲ್ಲಿ ಯಾವುದೇ ಒಪ್ಪಂದಗಳಿಗೆ ಸಹಿ ಹಾಕದಿರಲು ನಿರ್ಧರಿಸಿದ್ದೇವೆಂದರು.

ಹೂಡಿಕೆದಾರರು ಸ್ಥಳೀಯವಾಗಿ ಉದ್ಯೋಗವನ್ನು ಸೃಷ್ಟಿಸಲು ಶ್ರೇಣಿ –2 ಮತ್ತು ಶ್ರೇಣಿ –3 ನಗರಗಳಲ್ಲಿ ಹೂಡಿಕೆ ಮಾಡಲು ಆಸಕ್ತಿ ವ್ಯಕ್ತಪಡಿಸಿದ್ದಾರೆ. ಈ ನಗರಗಳು ರೋಮಾಂಚಕವಾಗಿರಬೇಕೆಂದು ಅವರು ಬಯಸುತ್ತಾರೆ. ಯುವಕರು ಅಲ್ಲಿ ಉದ್ಯೋಗಗಳನ್ನು ಪಡೆಯಬೇಕು ಮತ್ತು ದೊಡ್ಡ ನಗರಗಳಿಗೆ ಬರುವುದನ್ನು ತಪ್ಪಿಸಬೇಕೆಂದು ಹೇಳಿದರು.

ಮುಂದಿನ 25 ವರ್ಷಗಳವರೆಗೆ ನಾವು ಚಲನಶೀಲತಾ ಯೋಜನೆಯನ್ನು ಸಿದ್ಧಪಡಿಸ ಬೇಕಾಗಿದೆ. ಎಲ್ಲಾ ಪಟ್ಟಣ ಮತ್ತು ನಗರಗಳಿಗೆ ರಿಂಗ್ ರಸ್ತೆ ಕಡ್ಡಾಯವಾಗಿದೆ. ಬೆಂಗಳೂರಿನಲ್ಲಿ ವಿಳಂಬವಾದ ಯೋಜನೆಗಳನ್ನು ಉಲ್ಲೇಖಿಸಿ, ಬೇರೆಡೆ ಇದೇ ರೀತಿಯ ಲೋಪಗಳನ್ನು ಅನುಮತಿಸಲಾಗುವುದಿಲ್ಲ ಎಂದರು.

**45 ಕಂಪನಿಗಳ ಜೊತೆ ಹೂಡಿಕೆ**

ದಾವೋಸ್ ಕಾರ್ಯಕ್ರಮದಲ್ಲಿ ಡಾಟಾ ಸೆಂಟರ್, ಗ್ಲೋಬಲ್ ಕೇಪಬಲ್ ಸೆಂಟರ್, ಆಹಾರ ಮತ್ತು ಪಾನೀಯ, ಏವಿಯೇಷನ್, ನವೀಕೃತ ಇಂಧನ, ಇವಿ, ಎಲೆಕ್ಟ್ರಾನಿಕ್ಸ್, ಅಡ್ವಾನ್ಸ್ ಮ್ಯಾನ್ಯುಫ್ಯಾಕ್ಚರ್ ಕ್ಷೇತ್ರಕ್ಕೆ ಸಂಬಂಧಿಸಿ 45ಕ್ಕೂ ಹೆಚ್ಚು ಕಂಪನಿಗಳ ಜೊತೆ ದ್ವಿಪಕ್ಷೀಯ ಮಾತುಕತೆ ನಡೆಸಲಾಗಿದೆ. ನಮ್ಮಲ್ಲಿ ಲಭ್ಯವಿರುವ ನೀರು, ವಿದ್ಯುತ್ ಸೇರಿ ಎಲ್ಲಾ ಅಗತ್ಯ ಮಾಹಿತಿಗಳನ್ನು ಕಂಪನಿಗಳು ಪಡೆದಿವೆ. ಹೊರ ದೇಶಗಳಲ್ಲಿ ಉದ್ಯಮ ಮಾಡುತ್ತಿರುವ ಅನಿವಾಸಿ ಭಾರತೀಯರು ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆಂದರು.

## ಜೆಡಿಎಸ್ ಎಂದಿಗೂ ಅಧಿಕಾರ ಪಡೆಯುವುದಿಲ್ಲ: ಸಿ.ಎಂ.

• ಪ್ರಜೋದಯ ವರದಿ

**ಬೆಂಗಳೂರು:** ಜೆಡಿಎಸ್ ಯಾವ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ ವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭವಿಷ್ಯ ನುಡಿದರು.

ಹಾಸನದಲ್ಲಿ ನಡೆದ ಜೆಡಿಎಸ್ ಜನತಾ ಸಮಾವೇಶಕ್ಕೆ ಭಾನುವಾರ ಮೈಸೂರಿನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 2028ರಲ್ಲೂ ನಾವೇ ಅಧಿಕಾರಕ್ಕೆ ಬರುತ್ತೇವೆ. ಜೆಡಿಎಸ್ –ಬಿಜೆಪಿಯವರು ಮೈತ್ರಿ ಮಾಡಿಕೊಂಡರು ಕೂಡ ಅಧಿಕಾರಕ್ಕೆ ಬರುವುದಕ್ಕೆ ಸಾಧ್ಯವೇ ಇಲ್ಲವೆಂದರು.

ನಮಗೂ ಸಮಯ ಬರುತ್ತದೆಂಬ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಜೆಡಿಎಸ್ ಯಾವ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ. ಅವರು ಯಾವ ಅರ್ಥದಲ್ಲಿ ಹೇಳುತ್ತಾರೆಯೋ ಗೊತ್ತಿಲ್ಲ. 17 ಸ್ಥಾನ ಗೆದ್ದಿರುವವರಿಗೆ ಹೇಗೆ ಅಧಿಕಾರ ಸಿಗುತ್ತ ದೆಂದು ಕೇಳಿದರು. ಸುಮ್ಮನೆ ರಾಜಕೀಯ ಭಾಷಣ ಮಾಡಿ ದಾಕ್ಷಣಕ್ಕೆ ಆಗುತ್ತದೆಯೇ. ನಾನು ಅಧ್ಯಕ್ಷನಾಗಿದ್ದಾಗ 2004ರಲ್ಲಿ 59 ಸ್ಥಾನಗಳನ್ನು ಜೆಡಿಎಸ್ ಗೆದ್ದಿತ್ತು. ಈಗ ಎಷ್ಟಿದ್ದಾರೆಂದು ಪ್ರಶ್ನಿಸಿದರು.

**ಅವರಿಗೆ ಅಧಿಕಾರ ಬಿಟ್ಟು ಬಿಡ್ತಾರಾ**

ಒಂದು ವೇಳೆ ಬಿಜೆಪಿಯವರು ಅಧಿಕ ಸ್ಥಾನ ಗೆದ್ದರೆ ಸುಮ್ಮನೆ ಬಿಟ್ಟು ಬಿಡುತ್ತಾರೆಯೇ. ನೀವೇ ಮುಖ್ಯಮಂತ್ರಿ ಆಗಿ ಎಂದು ಜೆಡಿಎಸ್‌ನವರಿಗೆ ಹೇಳುತ್ತಾರೆಯೇ. ಎಲ್ಲಕ್ಕಿಂತಲೂ ಮುಖ್ಯವಾಗಿ, ಯಾವುದೇ ಕಾರಣಕ್ಕೂ ಅವರು ಗೆಲ್ಲುವುದೇ ಇಲ್ಲ ವೆಂದರು. ಕಾನೂನಿನ ಪ್ರಕಾರ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಬಂಧನವಾಗಿದೆ. ಅದರಲ್ಲಿ ಸರ್ಕಾರವಾಗಲಿ, ನಾವಾ ಗಲಿ ಮಧ್ಯಪ್ರವೇಶಿಸಿಲ್ಲ. ರೇವಣ್ಣ ಅವ ರದು ಮಾತ್ರವಲ್ಲ, ಯಾವುದೇ ಪ್ರಕರಣದಲ್ಲೂ ಸರ್ಕಾರ ಮಧ್ಯಪ್ರವೇಶ ಮಾಡುವುದಿಲ್ಲ. ಅಧಿಕಾರಿಗಳಿಗೆ ಸರ್ಕಾರ ಬಹುಮಾನ ಕೊಟ್ಟಿಲ್ಲ. ಯಾರು ಕೊಡಲು ಹೋಗುತ್ತಾರೆ. ಅದೆಲ್ಲಾ ಸುಳ್ಳು ಎಂದರು. ಜೆಡಿಎಸ್ ಅಧಿಕಾರಕ್ಕೆ ಬಂದರೆ ಅವರೂ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿ ಎಂದು ಹೇಳಿದರು.

## ಪತಂಜಲಿ ಯೋಗ ಪರಿವಾರದಿಂದ ಸಾಮೂಹಿಕ ಸೂರ್ಯ ನಮಸ್ಕಾರ



• ಪ್ರಜೋದಯ ವರದಿ

**ಹಾಸನ:** ರಥ ಸಪ್ತಮಿ ಅಂಗವಾಗಿ ನಗರದ ಗಂಧದ ಕೋಠಿ ಉದ್ಯಾನ ವನದಲ್ಲಿ ಭಾನುವಾರ ಪತಂಜಲಿ ಯೋಗ ಪರಿವಾರದಿಂದ ಅಗ್ನಿಹೋತ್ರ ಸಹಿತ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮ ಹಮ್ಮಿ ಕೊಳ್ಳಲಾಗಿತ್ತು.

ಯೋಗ ಸಾಧಕ ಶೇಷಪ್ಪ ಅವರು 108 ಸಾಮೂಹಿಕ ಸೂರ್ಯ ನಮಸ್ಕಾರ ಮಾಡುವ ಮೂಲಕ ಯಜ್ಞಕ್ಕೆ ಚಾಲನೆ ನೀಡಿದರು. ರಾಜ್ಯ ಯಜ್ಞ ಪ್ರಭಾರಿ ಹರಿಹರಪುರ ಶ್ರೀಧರ್ ಅವರ ಮಾರ್ಗದರ್ಶನದಲ್ಲಿ ವೇದ ಭಾರತೀ ಮಹಿಳಾ ತಂಡ ಅಗ್ನಿ ಹೋತ್ರವನ್ನು ವೇದ ಮಂತ್ರಗಳೊಂದಿಗೆ ನೆರವೇರಿಸಿದರು. ನಗರದ ವಿವಿಧ ಯೋಗ ಕೇಂದ್ರಗಳ ಶಿಕ್ಷಕರು ಹಾಗು ಯೋಗಾ ಪಟುಗಳು 108 ಸೂರ್ಯ ನಮಸ್ಕಾರ ಮಾಡಿದರು.

ಹರಿಹರಪುರ ಶ್ರೀಧರ್ ಅವರು ಮಾತನಾಡಿ, ಸೂರ್ಯ ದೇವ ಜೀವ ಶಕ್ತಿ, ಆರೋಗ್ಯ ಹಾಗು ಚೈತನ್ಯದ ಮೂಲವಾಗಿದೆ. ನಿತ್ಯ ಯೋಗಾಭ್ಯಾಸ ಮತ್ತು ಸೂರ್ಯೋಪಾಸನೆಯಿಂದ ದೈಹಿಕ–ಮಾನಸಿಕ ಆರೋಗ್ಯ ಸಾಧಿಸಬಹುದೆಂದರು. ರಾಜ್ಯ ಸಮಿತಿ ಸದಸ್ಯ ಪರಮೇಶ್ವರ ಅವರು ಮಾತನಾಡಿ, ರಥ ಸಪ್ತಮಿಯ ವೈಜ್ಞಾನಿಕ ಹಾಗು ಧಾರ್ಮಿಕ ಮಹತ್ವವನ್ನು ವಿವರಿಸಿದರು.

ಪತಂಜಲಿ ಯೋಗ ಪರಿವಾರ ಜಿಲ್ಲಾ ಸಂರಕ್ಷಕ ಎಸ್.ಡಿ.ಲೋಕನಾಥ್, ರಾಜ್ಯ ಯುವ ಪ್ರಭಾರಿ ಸುರೇಶ್ ಪ್ರಜಾಪತಿ, ಮಹಿಳಾ ಪ್ರಭಾರಿ ಶಾರದಾ ಧರ್ಮಾನಂದ, ಕವಿತಾ ಮಾಲತೇಶ್, ಸಚಿನ್, ಕೇಶವಮೂರ್ತಿ, ವಿಜಯಕುಮಾರ್ ಮತ್ತಿತರರಿದ್ದರು.

## ಇಬ್ಬರು ಪತ್ರಕರ್ತರಿಗೆ ಗಣರಾಜ್ಯೋತ್ಸವ ಪ್ರಶಸ್ತಿ

• ಪ್ರಜೋದಯ ವರದಿ





**ಹಾಸನ:** ನಗರದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಜ.26ರ ಸೋಮವಾರ ನಡೆಯಲಿರುವ 77ನೇ ಗಣ ರಾಜ್ಯೋತ್ಸವದಲ್ಲಿ ಜಿಲ್ಲೆಯ ಇಬ್ಬರು ಪತ್ರಕರ್ತರನ್ನು ಜಿಲ್ಲಾಡಳಿತ ಸನ್ಮಾನಕ್ಕೆ ಆಯ್ಕೆ ಮಾಡಿದೆ.

ಅರಕಲಗೂಡಿನ ಪ್ರಜಾವಾಣಿ ಹಿರಿಯ ವರದಿಗಾರ ಜಿ.ಚಂದ್ರಶೇಖರ ಹಾಗು ಜನಮಿತ್ರ ಪ್ರಾದೇಶಿಕ ದಿನ ಪತ್ರಿಕೆ ಉಪ ಸಂಪಾದಕಿ ಲಕ್ಷ್ಮಿ ಎಸ್.ಪ್ರಸಾದ್ ಸನ್ಮಾನ ಸ್ವೀಕರಿಸುವರು.

ಜಿ.ಚಂದ್ರಶೇಖರ ಅವರು 1977ರಲ್ಲಿ ಕನ್ನಡ ಪ್ರಭ ದಿನ ಪತ್ರಿಕೆ ಹಂಚುವ ಮೂಲಕ ಪತ್ರಿಕೋದ್ಯಮ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದರು. ನಂತರ ಪ್ರಜಾವಾಣಿ ಏಜೆಂಟರಾಗಿ, ವರದಿಗಾರರಾದರು. ಸಂಯುಕ್ತ ಕರ್ನಾಟಕ, ಮುಂಗಾರು, ಮುಂಜಾನೆ, ಜನತಾ ಮಾಧ್ಯಮ, ಜನಮಿತ್ರ ವರದಿಗಾರರಾಗಿ ಕಳೆದ 30 ವರ್ಷಗಳಿಂದ ಪ್ರಜಾವಾಣಿ ವರದಿಗಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು ಜಯಪುರ ಗ್ರಾಮದ ಲಕ್ಷ್ಮಿ ಎಸ್. ಪ್ರಸಾದ್ ಅವರು 2009ರ ನ. 19 ರಿಂದ ಜನಮಿತ್ರ ದಿನಪತ್ರಿಕೆಯಲ್ಲಿ ಕೆಲಸಕ್ಕೆ ಸೇವೆ ಆರಂಭಿಸಿದ್ದಾರೆ. 16 ವರ್ಷಗಳಿಂದ ಒಂದೇ ಸಂಸ್ಥೆಯಲ್ಲಿ ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ. ನ್ಯೂಸ್ ಎಡಿಟಿಂಗ್, ಸಂಪಾದಕೀಯ ಪುಟ ವಿನ್ಯಾಸ, ಭಾನುವಾರದ ವಿಶೇಷ ಸಾಪ್ತಾಹಿಕ ಜೀವನ್ಮುಖಿ ಅಲ್ಲದೆ ವಿಶೇಷ ದಿನಗಳಲ್ಲಿ ವಿಶೇಷ ಪುಟಗಳನ್ನು ನಿಬಾಯಿಸುತ್ತಿದ್ದಾರೆ.

ಸನ್ಮಾನಿತರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಹಾಗು ಸಂಘದ ಪದಾಧಿಕಾರಿಗಳು ಅಭಿನಂದಿಸಿದ್ದಾರೆ.

# ಗೊರೂರು ಶ್ರೀ ಯೋಗಾನರಸಿಂಹ ಸ್ವಾಮಿ ರಥೋತ್ಸವ

» ಮೊದಲನೇ ಪುಟದಿಂದ

ಸಂದರ್ಭದಲ್ಲಿ ಗ್ರಾಮಸ್ಥರು, ಅಕ್ಕಪಕ್ಕಗಳ ಗ್ರಾಮಗಳ ಜನರ ಆಗಮಿಸಿ ಹಣ್ಣು ದವನವನ್ನು ರಥಕ್ಕೆ ತೂರಿ ಕೃತಾರ್ಥ ಭಾವನೆ ಹೊಂದಿದರು.

ದೇವರ ಉತ್ಸವ ವೇಳೆ ಹರಕೆ ತೀರಿಸುವ ಭಕ್ತರು ಹೇಮಾವತಿ ನದಿಯಲ್ಲಿ ಪವಿತ್ರಸ್ನಾನ ಮಾಡಿದರ ಲ್ಲದೆ. ಗುಂಪು ಗುಂಪಾಗಿ ಸಹ ಭೋಜನವನ್ನು ಸಿದ್ಧಪಡಿಸಿ ಭಕ್ತರಿಗೆ ನೀಡುತ್ತಿದ್ದರು. ರಥದ ಬೀದಿ ಯಲ್ಲಿ ನಿವಾಸಿಗಳು ರಥ ಎಳೆಯುವ ಭಕ್ತರಿಗೆ ಮಜ್ಜಿಗೆ,ಬೆಲ್ಲದ ಪಾನಕ ನೀಡಿ ಪುನಿತರಾಗುತ್ತಿದ್ದದ್ದು ಕಂಡು ಬಂದಿತು. ಬೇಸಿಗೆಯ ಬಿಸಿಲಿನ ತಾಪವನ್ನು ಲೆಕ್ಕಿಸದೆ ನಿರೀಕ್ಷೆಯಂತ್ತೆ ಸಾಹಸ್ರಾರು ಸಂಖ್ಯೆಯಲ್ಲಿ ಜನರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಸ್ಥಳೀಯ ಪೊಲೀಸ್ ಸಿಬ್ಬಂದಿ ಸ್ಥಳದಲ್ಲಿ ಹಾಜರಿದ್ದು, ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸಿದ್ದರು.

**ಹಿನ್ನೆಲೆ :** ಸುಮಾರು 610ವರ್ಷಗಳ ಇತಿಹಾಸ ವಿರುವ ಯೋಗಾನರಸಿಂಹಸ್ವಾಮಿ ದೇವಾಲಯ ಹೇಮಾವತಿ ನದಿ ತಪ್ಪಲಿನ ಪಶ್ಚಿಮಾಭಿಮುಖವಾಗಿ ಇದ್ದು, ಇದು ರಾಜ್ಯದ ಇತರೆ ದೇವಾಲಯಗಳಿಗಿಂತ ತುಂಬಾ ವಿಶೇಷವಾಗಿದೆ. ಪ್ರತಿ ವರ್ಷವೂ ಕೂಡ ಸಪ್ತಮಿಯಂದು ರಥೋತ್ಸವ ಅತ್ಯಂತ ಅರ್ಥಪೂರ್ಣವಾಗಿ ನೆರವೇರುತ್ತದೆ.



ಗೊರೂರು ಅಂಬೇಡ್ಕರ್ ನಗರದ ದಲಿತ ಸಮುದಾಯದವರು ತಮ್ಮ ಸ್ವಂತ ಹಣದಿಂದ ಭಾರೀ ಗಾತ್ರದ ಹೂವಿನ ಹಾರವನ್ನು ಸಿದ್ಧಪಡಿಸಿ ಮೆರವಣಿಗೆಯಲ್ಲಿ ತರುತ್ತಾರೆ. ರಥದ ಬಳಿ ಬಂದ ನಂತರ ವಿಶೇಷವಾಗಿ ಪೂಜೆಯನ್ನು ಬ್ರಾಹ್ಮಣರ ಸಮ್ಮುಖದಲ್ಲಿ ನೆರವೇರಿಸಿ ರಥಕ್ಕೆ ಕಟ್ಟಿ ನಮಸ್ಕರಿಸಿದ ಮೇಲೆ ರಥವನ್ನು ಎಳೆಯಲು ಆರಂಭಿಸುತ್ತಾರೆ.

ತಾಲ್ಲೂಕಿನ ಹರದೂರುಪುರ ಲಕ್ಷ್ಮೀ ರಂಗನಾಥ ಸ್ವಾಮಿ ಬ್ರಹ್ಮ ರಥೋತ್ಸವವು ಭಾನುವಾರ ರಥ ಸಪ್ತಮಿಯಂದು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನೆರವೇರಿತು. ಬೆಳಿಗ್ಗೆ ದೇವಾಲಯದಲ್ಲಿ ಸುಪ್ರಭಾತ ಸೇವೆ, ಮೂಲ ವಿಗ್ರಹಕ್ಕೆ ಫಲಪಂಚಾಮೃತ ಅಭಿಷೇಕ, ವಿಶೇಷ ಪುಷ್ಪಾಲಂಕಾರ, ಮಂತ್ರ ಪುಷ್ಪ, ನಂದಾ ದೀಪ ಆರಾಧನೆ ನಡೆಸಿ ಸೂರ್ಯ ಮಂಡಲೋತ್ಸವ, ಹೋಮ ಕಾರ್ಯಗಳನ್ನು ನಡೆಸಲಾಯಿತು. ಬಳಿಕ ಉತ್ಸವದಲ್ಲಿ ಬಂದ ದೇವರ ಮೂರ್ತಿಗಳನ್ನು ಅಲಂಕರಿಸಿದ ರಥದಲ್ಲಿ ಪ್ರತಿಷ್ಠಾಪಿಸಿ ವಿವಿಧ ಪೂಜಾ ಕೈಂಕರ್ಯಗಳನ್ನು ನಡೆಸಲಾಯಿತು.

ಬಳಿಕ ನೆರೆದಿದ್ದ ಭಕ್ತರು ಗೋವಿಂದ ನಾಮ ಸ್ಮರಣೆ ಮಾಡುತ್ತಾ ರಥ ಬೀದಿಯಲ್ಲಿ ತೇರನ್ನು ಎಳೆದು ಭಕ್ತಿ ಸಮರ್ಪಿಸಿದರು. ಭಕ್ತರು ರಥದ ಮೇಲೆ ಬಾಳೆ ಹಣ್ಣು, ದವನ ಪತ್ರವನ್ನು ತೂರಿ ಸಂಭ್ರಮಿಸಿದರು. ಸುತ್ತಮುತ್ತಲ ಗ್ರಾಮಗಳಿಂದ ಬಂದಿದ್ದ ಸಾವಿರಾರು ಭಕ್ತರು ರಥೋತ್ಸವವನ್ನು ಕಣ್ತುಂಬಿಕೊಂಡರು.

ರಥ ಸ್ವ–ಸ್ಥಾನ ಸೇರಿದ ಬಳಿಕ ಮಹಾ ಮಂಗಳಾರತಿ ನಡೆಸಿ ಪ್ರಸಾದ ವಿತರಿಸಲಾಯಿತು. ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಕೆ.ಸತೀಶ್, ಕಂದಾಯ ನಿರೀಕ್ಷಕ ಕೆ.ಎಸ್.ಲೋಕೇಶ್ ರಥೋತ್ಸವದಲ್ಲಿ ಭಾಗವಹಿಸಿದ್ದರು.

ಲಕ್ಷ್ಮೀರಂಗನಾಥಸ್ವಾಮಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬದ ಮನೆ ದೇವರಾಗಿದ್ದು, ಕುಟುಂಬದ ಸದಸ್ಯರು ರಥೋತ್ಸವದಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸುವುದು ಪದ್ಧತಿಯಾಗಿದೆ. ಭಕ್ತರಿಗೆ ಅನ್ನದಾಸೋಹ ನಡೆಸಲಾಯಿತು. ರಾತ್ರಿ ನವಿಲೋತ್ಸವ ನೆರವೇರಿತು. ರಥೋತ್ಸವದಪ್ರಯುಕ್ತ ದೇವಾಲಯದಲ್ಲಿ ಜ. 28 ರವರೆಗೆ ವಿವಿಧ ಉತ್ಸವಾದಿಗಳು ನಡೆಯಲಿದೆ.

ತಾಲ್ಲೂಕಿನ ಬಸವಾಪಟ್ಟಣ ಗ್ರಾಮದ ಪುರಾಣ ಪ್ರಸಿದ್ಧ ಶ್ರೀಲಕ್ಷ್ಮೀಕಾಂತೇಶ್ವರ ಸ್ವಾಮಿಯವರ ಬ್ರಹ್ಮರಥೋತ್ಸವವು ಅದ್ದೂರಿಯಾಗಿ ನೆರವೇರಿತು. ರಥೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು. ಶ್ರೀದೇವಿ ಮತ್ತು ಭೂದೇವಿ ಸಮೇತ ಕಾಂತಸ್ವಾಮಿಯವರ ಉತ್ಸವ ಮೂರ್ತಿಯನ್ನು ಅಲಂಕೃತ ರಥದಲ್ಲಿರಿಸಿ ಪೂಜೆ ಸಲ್ಲಿಸಿದ ನಂತರ ಭಕ್ತರು ರಥ ಎಳೆದರು.

ರಥದ ಹಿಂದೆ ವಿಪ್ರ ಸಮುದಾಯದ ಭಜನೆಗಳನ್ನು ಹಾಡುತ್ತಾ ಸಾಗಿದ್ದು ಭಕ್ತರ ಗಮನಸೆಳೆಯಿತು. ಭಕ್ತರು ಸೇರಿದ್ದ ಭಕ್ತರಿಗೆ ತಂಪುಪಾನೀಯ, ಮಜ್ಜಿಗೆ, ಪಾನಕ, ಚಾಕೋಲೇಟ್ ವಿತರಿಸಿದರು.

ವಿವಿಧ ಸಮುದಾಯಗಳ ವತಿಯಿಂದ ಅನ್ನ ಸಂತರ್ಪಣೆ ಹಮ್ಮಿಕೊಂಡಿದ್ದರು. ಬಸವಾಪಟ್ಟಣ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ನೂರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು. ರಥೋತ್ಸವದ ನಿಮಿತ್ತ ಶನಿವಾರದಿಂದಲೆ ವಿವಿಧ ವಿಶೇಷ ಪೂಜಾ ಕೈಂಕರ್ಯಗಳು ಜರುಗಿದ್ದವು. ಸಂಪ್ರದಾಯದತೆ ಹೋಮಹವನಗಳು ಜರುಗಿದವು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಾಧ, ಉಪಾಧ್ಯಕ್ಷಬಿ.ಜೆ.ಕುಮಾರ, ಸದಸ್ಯರು, ಅಭಿವೃದ್ಧಿ ಅಧಿಕಾರಿ, ಗ್ರಾಮದ ಪ್ರಮುಖರು, ವಿವಿಧೆಡೆಗಳಿಂದ ಆಗಮಿಸಿದ್ದ ಭಕ್ತರಿದ್ದರು.

## ಬುದ್ಧಿಶಕ್ತಿ ಬಳಸಿ ಮತ ಚಲಾಯಿತಿ

• ಪ್ರಜೋದಯ ವರದಿ

**ನವದೆಹಲಿ:** ಯಾವುದೇ ರೀತಿಯ ಆಕರ್ಷಣೆ, ಪೂರ್ವಗ್ರಹ ಮತ್ತು ತಪ್ಪು ಮಾಹಿತಿಗಳ ಪ್ರಭಾವಕ್ಕೆ ಒಳಗಾಗದೆ, ಬುದ್ಧಿಶಕ್ತಿಯನ್ನು ಬಳಸಿ ಎಲ್ಲಾ ಭಾರತೀಯರು ತಮ್ಮ ಮತದಾನದ ಹಕ್ಕನ್ನು ಚಲಾಯಿಸುತ್ತಾರೆಂದು ನಾನು ನಂಬಿದ್ದೇನೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದರು.

16ನೇ ರಾಷ್ಟ್ರೀಯ ಮತದಾರರ ದಿನದ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿ, ದೇಶದ ಚುನಾವಣಾ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ತಮ್ಮ ಮತದಾನದ ಹಕ್ಕನ್ನು ಸೂಕ್ತ ರೀತಿಯಲ್ಲಿ ಚಲಾಯಿಸಬೇಕು. ತಮ್ಮ ಹಕ್ಕು ಚಲಾಯಿಸಲು ಮಹಿಳೆ ಯರು ಹೆಚ್ಚಿನ ಸಂಖ್ಯೆಯಲ್ಲಿ ಹೊರಬರುತ್ತಿರುವುದು ಸಂತಸದ ವಿಚಾರ ಎಂದರು.

ಚುನಾವಣಾ ಆಯೋಗ ಸ್ಥಾಪನೆಯಾದ ದಿನವನ್ನು (1950ರ ಜ. 25) ಕಳೆದ 16 ವರ್ಷಗಳಿಂದ ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲಾಗುತ್ತಿದೆ.

# ಶಾಂತಿ, ಸಹಬಾಳ್ವೆ ನೀಡುವಲ್ಲಿ ಬ್ರಾಹ್ಮಣರ ಕೊಡುಗೆ ಅಪಾರ

• ಪ್ರಜೋದಯ ವರದಿ

**ಸಕಲೇಶಪುರ:** ಪ್ರಪಂಚಕ್ಕೆ ಶಾಂತಿ, ಸಹಬಾಳ್ವೆ ಹಾಗೂ ಸಂಸ್ಕೃತಿಯನ್ನು ನೀಡುವಲ್ಲಿ ಬ್ರಾಹ್ಮಣ ಸಮುದಾಯದ ಕೊಡುಗೆ ಅಪಾರವೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.



ಪಟ್ಟಣದ ಶ್ರೀ ಸಕಲೇಶ್ವರ ಬ್ರಾಹ್ಮಣ ಸಂಘದ ವತಿಯಿಂದ ನಿರ್ಮಿಸಲಾದ ಶ್ರೀ ಗಾಯತ್ರಿ ವಿಪ್ರ ಸಮುದಾಯ ಭವನ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸಮಾಜಕ್ಕೆ ಬ್ರಾಹ್ಮಣ ಸಮುದಾಯ ನೀಡಿರುವ ಸೇವೆ ಅನನ್ಯವಾಗಿದೆ. ಜಗತ್ತಿಗೆ ಶಾಂತಿಯ ಸಂದೇಶ ಸಾರಿರುವ ದೇಶ ಭಾರತ. ನಾಗರಿಕತೆಯ ಆರಂಭದಿಂದ ಇಂದಿನವರೆಗೂ ಎಲ್ಲಾ ಕ್ಷೇತ್ರಗಳಲ್ಲಿ ಬ್ರಾಹ್ಮಣರು ತಮ್ಮದೇ ಆದ ಕೊಡುಗೆ ನೀಡುತ್ತಾ ಬಂದಿದ್ದಾರೆ. ಉತ್ತಮ ಸಂಸ್ಕಾರ, ಆಚಾರ–ವಿಚಾರಗಳನ್ನು ಒಳಗೊಂಡ ಜೀವನಶೈಲಿ ಬ್ರಾಹ್ಮಣ ಸಮುದಾಯದ ವೈಶಿಷ್ಟ್ಯವಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣರ ಸಂಖ್ಯೆ ಕುಸಿಯುತ್ತಿರುವುದು ಆತಂಕಕಾರಿಯಾಗಿದೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಯುವಕರು ವಿದೇಶಕ್ಕೆ ತೆರಳಿ ಅಲ್ಲಿಯೇ ತಮ್ಮ ಬದುಕು ಕಟ್ಟಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಸಕಲೇಶಪುರದಲ್ಲಿ ಬ್ರಾಹ್ಮಣ ಸಮುದಾಯದ ಅಗತ್ಯ ಬಹಳ ವಾಗಿತ್ತು. ಹಲವು ವರ್ಷಗಳಿಂದ ಕುಂಟುತ್ತ ಸಾಗುತ್ತಿದ್ದ ಈ ಕಟ್ಟಡ ನಿರ್ಮಾಣದ ಹಿಂದೆ ಅನೇಕ ಜನರ ಪರಿಶ್ರಮ ಇದೆ. ಇಂದು ಈ ಭವನ ಉದ್ಘಾಟನೆಯಾಗಿರುವುದು ಸಂತೋಷದಾಯಕ ವಿಷಯ ಎಂದರು.

ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ ಅವರು ಮಾತನಾಡಿ, ತನ್ನದೇ ಆದ ಸಂಸ್ಕೃತಿ ಹಾಗೂ ಆಚಾರ–ವಿಚಾರಗಳನ್ನು ಒಳಗೊಂಡ ಬ್ರಾಹ್ಮಣ ಸಮುದಾಯ ಎಲ್ಲರಿಗೂ ಮಾದರಿ. ಮೀಸಲಾತಿ ವ್ಯವಸ್ಥೆಯಿಂದಾಗಿ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಕುಟುಂಬಗಳಿಗೆ ತೊಂದರೆ ಆಗುತ್ತಿದೆ. ಈ ಕಟ್ಟಡ ನಿರ್ಮಾಣಕ್ಕೆ ತನ್ನ ಅಧಿಕಾರ ಅವಧಿಯಲ್ಲಿ ಸಾಧ್ಯವಾದಷ್ಟು ಸಹಾಯ ಮಾಡಿದ್ದೇನೆಂದು ತಿಳಿಸಿದರು. ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ಬ್ರಾಹ್ಮಣ ಸಮುದಾಯದ ಬುದ್ಧಿವಂತಿಕೆ, ಪಾಂಡಿತ್ಯ ಹಾಗೂ ಮಾರ್ಗದರ್ಶನ ಉತ್ತಮ ಸಮಾಜ ನಿರ್ಮಾಣಕ್ಕೆ ಅಗತ್ಯವಿದೆ ಎಂದರು.

ವಿಶ್ವ ಹಿಂದೂ ಪರಿಷತ್ ಪ್ರಾಂತ ಸಂಪರ್ಕ ಪ್ರಮುಖ ಮಂಜುನಾಥ್ ಸ್ವಾಮಿ ಅವರು ಮಾತನಾಡಿ, ಪೋಷಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ನೀಡಬೇಕು. ಆಗ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಅದಕ್ಕಾಗಿ ನಾವು ಸಂಘಟಿತರಾಗಿರಬೇಕು ಎಂದರು.

ರಾಜಕೀಯ, ಕೈಗಾರಿಕೆ, ಕ್ರೀಡೆ, ಕಲೆ, ವ್ಯಾಪಾರ, ಉದ್ಯಮ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಬ್ರಾಹ್ಮಣ ಸಮುದಾಯದವರು ಮುಂಚೂಣಿಯಲ್ಲಿದ್ದಾರೆ. ಅದಕ್ಕೆ ನಮ್ಮ ಹಿರಿಯರು ನೀಡಿದ ಉತ್ತಮ ಸಂಸ್ಕಾರವೇ ಕಾರಣ ಎಂದು ಹೇಳಿದರು. ಪುರಾಣಕಾಲದಿಂದ ಇಂದಿನವರೆಗೂ ಶ್ರೇಷ್ಠ ಸಂತರು, ಮುನಿಗಳು ಹಾಗೂ ವಿದ್ವಾಂಸರು ನಮಗೆ ಮಾರ್ಗದರ್ಶನ ನೀಡಿದ್ದಾರೆ. ದೇಶಕ್ಕೆ ಸಂಕಟ ಬಂದಾಗಲೆಲ್ಲಾ ಬ್ರಾಹ್ಮಣ ಸಮುದಾಯ ಮುನ್ನೆಲೆಗೆ ಬಂದಿದೆ. ಭವಿಷ್ಯದಲ್ಲಿ ಸಮು ದಾಯ ಇನ್ನಷ್ಟು ಸದೃಢವಾಗಬೇಕೆಂದು ಆಶಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಸಮಾಜದ ರಾಜ್ಯಾಧ್ಯಕ್ಷ ರಾದ ರಘುನಾಥ್ ಮಾತನಾಡಿ, ಹಾರ ತುರಾಯಿ ಹಾಕಿಸಿಕೊಳ್ಳುವುದಕ್ಕಿಂತ ನಾನು ಸಮಾಜದ ಏಳಿಗೆ ಕಾರ್ಯಕ್ಕೆ ಆದ್ಯತೆ ಕೊಡುತ್ತೇನೆ.ಅಖಿಲ ಕರ್ನಾಟಕ ಬ್ರಾಹ್ಮಣ ಸಂಘಕ್ಕೆ ಪ್ರತಿಯೊಬ್ಬರು ಸದಸ್ಯರಾಗಲು ಮುಂದಾಗಬೇಕು. ಸದಸ್ಯರ ಒಟ್ಟು 150 ಜನ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ತಲಾ 10000 ರೂ. ಸ್ಕಾಲರ್ ಶಿಪ್ ನೀಡಲಾಗುತ್ತದೆ ಎಂದರು.

ಕಟ್ಟಡ ನಿರ್ಮಾಣಕ್ಕೆ ಸಹಕರಿಸಿದ ಗಣ್ಯರನ್ನು ಸನ್ಮಾನಿಸಲಾಯಿತು. ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ ಪ್ರಕಾಶ್ ಧನಾವತ್, ಕಾರ್ಯದರ್ಶಿ ಆರ್.ಎನ್.ಶಿವಶಂಕರ್, ಹಿಂದೂ ಸಂಘಟನೆ ಮುಖಂಡ ರಘು, ಗಾಯತ್ರಿ ವಿಪ್ರ ಮಹಿಳಾ ಸಂಘದ ಅಧ್ಯಕ್ಷೆ ಸುವರ್ಣ ಸುರೇಶ್, ಮಾಲಿನಿ ಸೋಮೇಶ್, ವಕೀಲ ಆರ್.ಎನ್. ಕೃಷ್ಣಮೂರ್ತಿ, ಹಿರಿಯ ಮುಖಂಡ ಕೆ.ವಿ.ಶ್ರೀನಿವಾಸ್ ಮೂರ್ತಿ ಉಪಸ್ಥಿತರಿದ್ದರು.

# ಯಲಗುಂದ ಸರ್ಕಾರಿ ಶಾಲೆ ಉಳಿವಿಗಾಗಿ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಕೆಪಿಎಸ್–ಮ್ಯಾಗ್ನೆಟ್ ಹೆಸರಿನಲ್ಲಿ ತಾಲ್ಲೂಕಿನ ಯಲಗುಂದ ಸರ್ಕಾರಿ ಶಾಲೆ ಮುಚ್ಚಲು ಸರ್ಕಾರ ಮುಂದಾಗಿದ್ದು, ಅವೈಜ್ಞಾನಿಕ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ಭಾನುವಾರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.




ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚೈತ್ರ ಅವರು ಮಾತನಾಡಿ, ಒಂದು ಬಾರಿ ಶಿಕ್ಷಣ ಇಲಾಖೆ ಸರ್ಕಾರಿ ಶಾಲೆ ಮುಚ್ಚಿದರೆ ಮತ್ತೆ ಎಷ್ಟೇ ಪ್ರಯತ್ನಪಟ್ಟರೂ ಶಾಲೆ ತೆರೆಯಲು ಸಾಧ್ಯವಿಲ್ಲ. ಶಾಲೆಯಲ್ಲಿ ಒಂದು ಮಗು ಇದ್ದರೂ ಶಾಲೆ ಇರಬೇಕು. ಒಬ್ಬ ಶಿಕ್ಷಕರನ್ನು ನೇಮಕ ಮಾಡಬೇಕು. ಒಂದೇ ಒಂದು ಮಗು ಇದ್ದರೂ ಶಾಲೆ ಮುಚ್ಚುವುದಿಲ್ಲ ಎಂದಿರುವ ಶಿಕ್ಷಣ ಸಚಿವರು ಹಿಂಬಾಗಿಲ ಮೂಲಕ ಶಾಲೆಗಳಿಗೆ ಬೀಗ ಹಾಕುತ್ತಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಸುಷ್ಮಾ ಅವರು ಮಾತನಾಡಿ, ಈಗಾಗಲೇ ರಾಜ್ಯಾದ್ಯಂತ ಕೆಪಿಎಸ್–ಮ್ಯಾಗ್ನೆಟ್ ಯೋಜನೆ ವಿರೋಧಿಸಿ ಪೋಷಕರ ಪ್ರತಿಭಟನೆಗಳು ನಡೆಯುತ್ತಿವೆ. ಈ ಯೋಜನೆ ಅಡಿಯಲ್ಲಿ ರಾಜ್ಯಾದ್ಯಂತ 40 ಸಾವಿರ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರದ ನಡೆ ಖಂಡನೀಯ. ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳು ಇಲ್ಲ ಎಂದು ಸರ್ಕಾರ ಹೇಳುತ್ತಿರುವುದು ಶುದ್ಧ ಸುಳ್ಳು. ರಾಜ್ಯದಲ್ಲಿ 37 ಲಕ್ಷ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ, ಸರ್ಕಾರದ ನಿರ್ಲಕ್ಷ್ಯದಿಂದ ಮಕ್ಕಳು ತೊಂದರೆ ಅನುಭವಿಸುವಂತಾಗಿದೆ. ರಾಜ್ಯದಲ್ಲಿ 21 ಸಾವಿರ ಸರ್ಕಾರಿ ಶಾಲಾ ಕಟ್ಟಡಗಳು ಹಲವು ವರ್ಷಗಳಿಂದ ದುರಸ್ತಿ ಕಂಡಿಲ್ಲ. 60,000ಕ್ಕೂ ಅಧಿಕ ಶಿಕ್ಷಕರ ಹುದ್ದೆ ಖಾಲಿ ಇವೆ. ಈ ಸಮಸ್ಯೆ ಬಗೆಹರಿಸುವುದನ್ನು ಬಿಟ್ಟು ಕೆಪಿಎಸ್ ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮೀಣ ಭಾಗದ ಶಾಲೆಗಳನ್ನು ಮುಚ್ಚಲು ಹೊರಟಿದೆ. ಕರ್ನಾಟಕದ ಜನತೆ ಈ ನೀತಿ ವಿರುದ್ಧ ಗಟ್ಟಿಯಾಗಿ ಹೋರಾಟ ಮಾಡಬೇಕಿದೆ ಹಾಗು ಹಾಗೂ ಈ ಊರಿನ ಸರ್ಕಾರಿ ಶಾಲೆ ಉಳಿಸಲು ಊರಿನ ಗ್ರಾಮಸ್ಥರು ಮುಂದಾಗಬೇಕೆಂದರು.

ಗ್ರಾಮಸ್ಥರಾದ ಆಶಿಕ್, ಬಸವರಾಜು, ಚಂದ್ರಶೇಖರ್, ದಿನೇಶ್, ಜಗದೀಶ್ ಭಾಗವಹಿಸಿದ್ದರು.

## ವಿದ್ಯೆ ಕಲಿತ ಶಾಲೆಯನ್ನು ಎಂದಿಗೂ ಮರೆಯಬಾರದು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪ್ರತಿಯೊಬ್ಬರಿಗೂ ಶಿಕ್ಷಣ ನೀಡಿ ಉಜ್ವಲ ಭವಿಷ್ಯ ರೂಪಿಸುವ ಶಾಲೆಯನ್ನು ವಿದ್ಯಾರ್ಥಿಗಳು ಮರೆಯಬಾರದೆಂದು ನಿವೃತ್ತ ಶಿಕ್ಷಣಾಧಿಕಾರಿ ಜಿನ್ನೇನಹಳ್ಳಿ ತಮ್ಮಣ್ಣಗೌಡ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಕಾರ್ತಿಕ್ ಪಬ್ಲಿಕ್ ಸ್ಕೂಲ್‌ನಲ್ಲಿ ಹಮ್ಮಿ ಕೊಂಡಿದ್ದ 16ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಪ್ರಪಂಚದಲ್ಲಿ ಎಲ್ಲದಕ್ಕೂ ಬೆಲೆ ಕಟ್ಟಬಹುದು. ಆದರೆ, ಶಿಕ್ಷಣ ನೀಡುವ ಸಂಸ್ಥೆಗೆ ಬೆಲೆ ನಿಗದಿಪಡಿಸಲು ಸಾಧ್ಯವಿಲ್ಲ. ಗ್ರಾಮೀಣ ಭಾಗದಲ್ಲಿಯೂ ಉತ್ತಮ ಶಿಕ್ಷಣ ಸಿಗುತ್ತಿದೆ. ಪೋಷಕರು ಹತ್ತಿರದ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಬೇಕು. ಅದರಿಂದ ಮಕ್ಕಳ ದಿನ ನಿತ್ಯದ ಚಟುವಟಿಕೆಗಳು ಶಿಕ್ಷಕರು ಮತ್ತು ಪೋಷಕರಿಗೆ ತಿಳಿಯುತ್ತದೆ. ಅವರು ತಪ್ಪು ದಾರಿ ತುಳಿದಾಗ ತಿದ್ದಲು ಅವಕಾಶ ಸಿಗುತ್ತದೆಂದರು.

ಡಿವೈಎಸ್‌ಪಿ ಬಾಲರಾಜ್ ಅವರು ಮಾತನಾಡಿ, ಮಕ್ಕಳಿಗೆ ಶಿಕ್ಷಣ ನೀಡು ವುದು, ಸಮಾಜದಲ್ಲಿ ಉತ್ತಮ ಕೆಲಸ, ಶಿಕ್ಷಣ ಸಂಸ್ಥೆಯನ್ನು ನಡೆಸುವುದು ಕಷ್ಟದ ಕೆಲಸವೆಂದರು.

2024–25ರ ಸಾಲಿನಲ್ಲಿ 10ನೇ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ ಹಿರಿಯ ವಿದ್ಯಾರ್ಥಿ, ಪ್ರಸಕ್ತ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಶಾಲೆಯ ಅಧ್ಯಕ್ಷ ಅನಂತಕೃಷ್ಣ, ಕಾರ್ಯ ದರ್ಶಿ ರೇಣುಕಾದೇವಿ, ಮುಖ್ಯ ಶಿಕ್ಷಕ ಚೇತನಕುಮಾರ್ ವೇದಿಕೆಯಲ್ಲಿ ಇದ್ದರು.



## ಆರ್‌ಜೆಡಿ ಕಾರ್ಯಾಧ್ಯಕ್ಷರಾಗಿ ತೇಜಸ್ವಿ ಯಾದವ್

• ಪ್ರಜೋದಯ ವರದಿ



**ಪಾಟ್ನಾ:** ಆರ್‌ಜೆಡಿ ನೂತನ ರಾಷ್ಟ್ರೀಯ ಕಾರ್ಯಾಧ್ಯಕ್ಷರಾಗಿ ತೇಜಸ್ವಿ ಯಾದವ್ ಅವರನ್ನು ನೇಮಕ ಮಾಡಲಾಗಿದೆ. ಬಿಹಾರದ ರಾಜಕೀಯದಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಯುವಕರು ಆಗಿರುವ ತೇಜಸ್ವಿ ಯಾದವ್ ಅವರನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಲಾಲು ಪ್ರಸಾದ್ ಯಾದವ್ ಅವರು ನೇಮಕ ಮಾಡಿದ್ದಾರೆ.

ಬಿಹಾರದ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಮತ್ತು ಅವರ ಪತ್ನಿ ರಾಬ್ರಿ ದೇವಿ ಪಾಲ್ಗೊಂಡಿದ್ದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಉದ್ಘಾಟನಾ ಸಮಾರಂಭದಲ್ಲಿ ಈ ಘೋಷಣೆ ಮಾಡಲಾಗಿದೆ. ಲಾಲು ಯಾದವ್ ಅವರು ತಮ್ಮ ಪುತ್ರ ತೇಜಸ್ವಿ ಯಾದವ್ ಅವರಿಗೆ ನೇಮಕದ ಆದೇಶ ಪತ್ರವನ್ನು ಹಸ್ತಾಂತರಿಸಿದರು.

# ಬಸ್ತಿಹಳ್ಳಿಯಲ್ಲಿ ಶಾಂತಿನಾಥ ತೀರ್ಥಂಕರರ ಮೂರ್ತಿಗೆ ಮಸ್ತಕಾಭಿಷೇಕ

• ಪ್ರಜೋದಯ ವರದಿ

**ಹಳೇಬೀಡು:** ಸಮೀಪದ ಬಸ್ತಿಹಳ್ಳಿಯಲ್ಲಿ ಭಾನುವಾರ 1008 ಶಾಂತಿನಾಥ ತೀರ್ಥಂಕರರ ಮೂರ್ತಿಗೆ ಮಸ್ತಕಾಭಿಷೇಕ ನಡೆಯಿತು.

ಹಾಸನದ ದಿಗಂಬರ ಜೈನ ಯುವಕ ಸಂಘ, ದೊಡ್ಡಬಸದಿ ಜೈನ ಸಂಘ ಹಾಗು ಸಮಸ್ತ ಜೈನ ಸಮಾಜದ ಆಶ್ರಯದಲ್ಲಿ ನಡೆದ ಮಸ್ತಕಾಭಿಷೇಕವನ್ನು ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ಭಕ್ತರು ಕಣ್ತುಂಬಿಕೊಂಡರು.

ಶ್ರವಣಬೆಳಗೊಳದ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಚಾರ್ಯವರ್ಯ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ನಡೆದ ಮಸ್ತಕಾಭಿಷೇಕ ವೀಕ್ಷಿಸಲು ಜೈನರು ಮಾತ್ರವಲ್ಲದೆ ಜೈನೇತರರುಭಾಗವಹಿಸಿದ್ದರು. ಕಂಬದಹಳ್ಳಿ ಜೈನಮಠದ ವಿಚಾರ ಪಟ್ಟಕ್ಷುಲ್ಲಕ ಆನಂದಕೀರ್ತಿ ಸ್ವಾಮೀಜಿ ಸಾನಿಧ್ಯದಲ್ಲಿ ಮಸ್ತಕಾಭಿಷೇಕ ನಡೆಯಿತು.

ಭಕ್ತರಿಂದ ಜಿನ ಮಂದಿರ ಆವರಣ ತುಂಬಿ ತುಳುಕುತ್ತಿತ್ತು. ಭವ್ಯವಾದ ಶಾಂತಿನಾಥ ಮಂದಿರದಲ್ಲಿ ಗಂಧ, ಚಂದನದ ಕಂಪಿನೊಂದಿಗೆ ವಿಭಿನ್ನ ಬಣ್ಣದ ಹೂವುಗಳು ಘಮಘಮಿಸಿದವು.



ಮಂಗಳ ದ್ರವ್ಯಗಳಿಂದ ನಡೆದ ಮಹಾ ಮಸ್ತ ಕಾಭಿಷೇಕ ವಿಶಿಷ್ಟ ಅನುಭವ ನೀಡಿತು. ಮಹಿಳೆ ಯರು ಸುಶ್ರಾವ್ಯವಾಗಿ ಜಿನ ಭಕ್ತಿಗೀತೆಗಳನ್ನು ಪ್ರಸ್ತುತ ಪಡಿಸಿದರು.

108 ಕಳಸಗಳಿಂದ ಜಲಾಭಿಷೇಕ ಮಾಡಿದಾ ಕ್ಷಣ ಮಂದಸ್ಮಿತ ಮೂರ್ತಿಯು ವಿವಿಧ ಭಂಗಿ ಯಲ್ಲಿ ಕಂಗೊಳಿಸಿತು. ನಂತರ ಎಳನೀರು, ಕ್ಷೀರ (ಹಾಲು), ಇಕ್ಷುರಸ (ಕಬ್ಬಿನ ಹಾಲು), ಕಳಸ, ಶ್ರೀಗಂಧ, ಅರಿಶಿನ, ಕಲ್ಕಚೂರ್ಣ (ಅಕ್ಕಿಹಿಟ್ಟು), ಚಂದನ, ಕಷಾಯಳಿಂದ ಅಭಿಷೇಕ ನೆರವೇರಿಸ ಲಾಯಿತು. ಕೊನೆಯಲ್ಲಿ ಬಣ್ಣದ ಹೂವುಗಳಿಂದ ಪುಷ್ಪವೃಷ್ಟಿ ನಡೆಯಿತು.

ವಿವಿಧ ದ್ರವ್ಯಗಳು ಶಾಂತಿನಾಥ ಮೂರ್ತಿಯ ಮಸ್ತಕದಿಂದ ಮುಖಕ್ಕೆ ಇಳಿದಾಗ ಮುಖದ ಭಾವನೆಗಳು ವಿಭಿನ್ನವಾಗಿ ಕಂಗೊಳಿಸಿತು. ವಿವಿಧ ಪೂಜಾ ವಿಧಾನಗಳು ಮುಗಿದ ನಂತರ ಮಂಗಳ ವಾದ್ಯದೊಂದಿಗೆ ಪಲ್ಲಕ್ಕಿ ಉತ್ಸವ ನಡೆಯಿತು. ಪುರೋಹಿತರಾದ ಪ್ರತಿಷ್ಠಾ ವಿಶಾರದ ಜಿನ ರಾಜೇಂದ್ರ, ಚಂದ್ರಪ್ರಸಾದ್ ಇಂದ್ರ, ಕಡದರ ವಳ್ಳಿ ಜಿನೇಂದ್ರ, ಹೆಚ್.ಎನ್.ಸುಖಿಕುಮಾರ, ಜಯಕುಮಾರ ಬಾಬು ಪೂಜಾ ವಿಧಾನ ನೆರ ವೇರಿಸಿದರು. ಹಾಸನ ದಿಗಂಬರ ಜೈನ ಯವಕ ಸಂಘದ ಅಧ್ಯಕ್ಷ ಹೆಚ್.ಕೆ.ದೇವ್ ನಾಗು, ಪದಾಧಿಕಾರಿಗಳಾದ ಹೆಚ್.ಪಿ.ನಾಗರಾಜು, ಎ.ಅಮೃತ್, ಹೆಚ್.ಎಸ್.ಧನುಷ್, ಹೆಚ್.ಎ. ಸಮಂತ್, ಶ್ರೇಯಸ್, ಸನ್ಮತಿ, ಸ್ಥವನ್, ವಿಕಾಸ್ ನೇತೃತ್ವದಲ್ಲಿ ಮಸ್ತಕಾಭಿಷೇಕ ನಡೆಯಿತು.

**ಭಗವಂತನ ದರ್ಶನದಿಂದ ಆನಂದ**

ಭಗವಂತನ ದರ್ಶನದಿಂದ ಮನಸ್ಸು ಪ್ರಫುಲ್ಲವಾಗುತ್ತದೆಂದು ಕಂಬದಹಳ್ಳಿ ಜೈನ ಮಠದ ವಿಚಾರ ಪಟ್ಟ ಕ್ಷುಲ್ಲಕ ಆನಂದ ಕೀರ್ತಿ ಸ್ವಾಮೀಜಿ ಹೇಳಿದರು.

ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ದೇವರಿಗೆ ಅರ್ಘ್ಯ ಸಮರ್ಪಿಸುವುದರಿಂದ ಜೀವನದಲ್ಲಿ ಏಳಿಗೆ ಆಗುತ್ತದೆ. ಉತ್ತರ ಭಾರತದ ಯಾವುದೇ ಜಿನ ಮಂದಿರಕ್ಕೆ ತೆರಳಿದರು ಅರ್ಘ್ಯ ಸಮರ್ಪಿಸುವ ಅಭ್ಯಾಸ ರೂಢಿಸಿಕೊಂಡಿದ್ದಾರೆ. ಹೀಗಾಗಿ ಅವರು ಸ್ಥಿತಿವಂತರಾಗಿದ್ದಾರೆ. ಮಕ್ಕಳಿಗೆ ದೇವರನ್ನು ಆರಾಧಿಸುವ ಅಭ್ಯಾಸ ರೂಢಿಸಿದರೆ ಉತ್ತಮ ಆಲೋಚನೆ ವೃದ್ಧಿಸುತ್ತದೆಂದು ಹೇಳಿದರು.

**AFFIDAVIT**

I, RANI K.C. S/o SURESH aged about 60 years, residing at Mudigere Village, Attavara Post, Dudda Hobli, Hassan Taluk & District, do hereby solemnly affirm and declare under:-

I, state that in my Son PRATHAM M.S. Studied at Podar Inter National School Hassan in 10th Standard School documents my name mentioned as RANI but in my Aadhar card & my son Birth Certificate my name has been mentioned as RANI K.C.

I state that I am swearing this affidavit for the purpose of declaration of My correct name : RANI K.C. is true and correct to the authority concerned.

I state that if any dispute is arise in this matter I will be held responsible for the same.

What is stated above is all true and correct to the best of my knowledge, belief and information.

Date : 22-01-2026 DEPONENT

Place : Hassan

# ಯುವ ಪೀಳಿಗೆಯ ಮತದಾನ ಅತಿ ಮುಖ್ಯ

## ರಾಷ್ಟ್ರೀಯ ಮತದಾನ ದಿನಾಚರಣೆಯಲ್ಲಿ ನ್ಯಾ.ಹೇಮಾವತಿ ಕರೆ

• ಪ್ರಜೋದಯ ವರದಿ

**ಹಾಸನ:** ಪ್ರತಿಯೊಬ್ಬ ಭಾರತೀಯರು 18 ವರ್ಷದ ನಂತರ ಸ್ವತಂತ್ರ್ಯವಾಗಿ ತಮ್ಮ ಹಕ್ಕು ಚಲಾಯಿಸುವ ಅಧಿಕಾರವನ್ನು ಹೊಂದಿದ್ದಾರೆ. ಅದರಂತೆ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಹೇಮಾವತಿ ಅವರು ಕರೆ ನೀಡಿದರು.

ಜಿಲ್ಲಾ ಪಂಚಾಯತಿ ಹೊಯ್ಸಳ ಸಭಾಂಗಣದಲ್ಲಿ ಭಾನುವಾರ ಏರ್ಪಡಿಸಿದ್ದ ರಾಷ್ಟ್ರೀಯ ಮತದಾನ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರಕ್ಕೆ ಉತ್ತಮ ನಾಯಕರನ್ನು ಆಯ್ಕೆ ಮಾಡುವಲ್ಲಿ ಯುವ ಪೀಳಿಗೆಯ ಮತದಾನ ಬಹಳ ಮುಖ್ಯವಾಗಿದೆ. 18 ವರ್ಷದ ನಂತರ ಸ್ವತಂತ್ರ್ಯವಾಗಿ ತಮ್ಮ ಹಕ್ಕು ಚಲಾಯಿಸುವ ಅಧಿಕಾರವನ್ನು ಹೊಂದಿದ್ದಾರೆ. ಭಾರತ ದೇಶ ಪ್ರತಿಯೊಬ್ಬರ ಆಸ್ತಿ. ಸಂವಿಧಾನ ಬದ್ಧವಾಗಿ ಮತದಾನದ ಹಕ್ಕುಗಳನ್ನು ಪಡೆದಿರುತ್ತಾರೆ, ಮತ ಚಲಾಸುವುದು ನಮ್ಮೆಲ್ಲರ ಜವಾಬ್ದಾರಿ ಹಾಗೂ ಮತದಾನ ಪಟ್ಟಿಯಲ್ಲಿ ಸುತ್ತ ಮುತ್ತಲಿನವರನ್ನು ಸೇರ್ಪಡೆಗೊಳಿಸಲು ಉತ್ತೇಜನ ನೀಡಬೇಕೆಂದರು.

ಯುವ ಪೀಳಿಗೆ ಮತದಾನದಲ್ಲಿ ಭಾಗವಹಿಸದಿರುವುದು ಹಾಗೂ ಮತದಾನ ಪಟ್ಟಿ ಸೇರ್ಪಡೆ ಆಸಕ್ತಿ ತೋರಿಸದಿರುವುದು ವಿಷಾದನೀಯ. 18 ವರ್ಷ ತುಂಬಿದ ಪ್ರತಿಯೊಬ್ಬರೂ ಮತದಾರ ಪಟ್ಟಿಯಲ್ಲಿ ಮೊದಲ ನೋಂದಣಿ ಮಾಡಿಕೊಳ್ಳುವುದು ಕರ್ತವ್ಯ. ಇಂದಿನ ಪ್ರಜೆಗಳು ಮುಂದಿನ ಭವಿಷ್ಯವಾಗಿದ್ದಾರೆ. ಯುವ ಸಮುದಾಯ ದೇಶಕ್ಕೆ ಉತ್ತಮ ನಾಯಕರನ್ನು ಆಯ್ಕೆ ಮಾಡಬೇಕು, ಅಭಿವೃದ್ಧಿ ಹಾದಿಯಲ್ಲಿ ಸಾಗಬೇಕೆಂದು ಹೇಳಿದರು.



ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಅವರು ಮಾತನಾಡಿ, ಪ್ರತಿಯೊಬ್ಬ ನಾಗರಿಕರು ದೇಶ ಕಟ್ಟುವ ರಾಜಕೀಯ ಪ್ರಜ್ಞೆ ಇರಬೇಕು. ಯುವ ಮತದಾರರು ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಮತದಾನ ಪ್ರಕ್ರಿಯೆಯಲ್ಲಿ ಭಾಗವಹಿಸಲು ಪ್ರತಿಯೊಬ್ಬರಿಗೂ ಮತದಾನದ ಪಟ್ಟಿಯಲ್ಲಿ ಹೆಸರು ಇರಬೇಕು ಎಂದರು.

ಮತದಾರರು ಯಾವುದೇ ಆಮಿಷಗಳಿಗೆ ಬಲಿಯಾಗದೆ ದೇಶದ ಅಭಿವೃದ್ಧಿ ದೃಷ್ಟಿಯಿಂದ ಉತ್ತಮ ನಾಯಕರನ್ನು ಆಯ್ಕೆ ಮಾಡಿಕೊಳ್ಳಬೇಕು, ಹಿರಿಯರು, ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೀವನವನ್ನು ಪಣಕ್ಕಿಟ್ಟು, ಬಲಿದಾನ, ಶ್ರಮದಿಂದ ಸ್ವಾತಂತ್ರ್ಯವನ್ನು ತಂದುಕೊಟ್ಟಿದ್ದಾರೆ ಹಾಗಾಗಿ ಇತಿಹಾಸವನ್ನು ಅರಿತು ಪ್ರತಿನಿಧಿಗಳ ಆಯ್ಕೆ ಮಾಡಬೇಕು. ಇಂದು 16ನೇ ರಾಷ್ಟ್ರೀಯ ಮತದಾನ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ರಾಜ್ಯದಲ್ಲಿ ಜಿಲ್ಲೆ ಶೇಕಡಾವಾರು ಮತದಾನದಲ್ಲಿದ್ದು, ಸ್ವೀಪ್ ವತಿಯಿಂದ ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲಿ ಭೇಟಿ ನೀಡಿ ಯುವ ಮತದಾರರ ನೋಂದಣಿ ಮಾಡಿಸಬೇಕೆಂದರು.

ಜಿಲ್ಲೆಯಲ್ಲಿ 26 ಸಾವಿರ ಹೊಸ ಯುವ ಮತದಾರರು ಸೇರ್ಪಡೆಯಾಗಿದ್ದಾರೆ, 15 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ಜಿಲ್ಲೆಯಲ್ಲಿ ಹೆಚ್ಚು ಮಹಿಳಾ ಮತದಾರಿದ್ದು, ಪ್ರತಿಯೊಬ್ಬರಲ್ಲಿಯೂ ರಾಜಕೀಯ ಪ್ರಜ್ಞೆ ಹೊಂದಬೇಕು. ರಾಜ್ಯದಲ್ಲಿ 2025-26 ರ ಮತದಾರರ ಪಟ್ಟಿಯ ಮ್ಯಾಪಿಂಗ್ ಕಾರ್ಯ ನಡೆಯುತ್ತಿದೆ. ಹಿಂದೆ 2001 ರಲ್ಲಿ ಮ್ಯಾಪಿಂಗ್ ಕಾರ್ಯ ಮಾಡಲಾಗಿತ್ತು ಎಂದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಭಾರ ಸದಸ್ಯ ಕಾರ್ಯದರ್ಶಿಗಳಾದ ಗಿರೀಗೌಡ ಅವರು ಮಾತನಾಡಿ, ಮತದಾನ ಶೇಕಡಾವಾರು ಕುಸಿಯುತ್ತಿದ್ದು, ಗ್ರಾಮೀಣ ಭಾಗದಲ್ಲಿ ಮತದಾನವಾಗುತ್ತಿದೆ ಆದರೆ ನಗರ ಭಾಗದಲ್ಲಿಯೇ ಮತದಾನ ಕಡಿಮೆಯಾಗುತ್ತಿದೆ. ಇದು ವಿಷಾದನೀಯ. ಜಾತಿ ಧರ್ಮ ಬಿಟ್ಟು ಉತ್ತಮ ನಾಯಕರನ್ನು ಮತದಾನದ ಮೂಲಕ ಆಯ್ಕೆ ಮಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಮಾತನಾಡಿ, ಭಾರತ 2011 ರಲ್ಲಿ ರಾಷ್ಟ್ರೀಯ ಮತದಾನ ದಿನಾಚರಣೆಯನ್ನು ಮೊದಲ ಬಾರಿಗೆ ಆರಂಭಿಸಲಾಯಿತು, ಇಂದು ಭಾರತ ಚುನಾವಣಾ ಆಯೋಗದ ನಮ್ಮ ಭಾರತ ನನ್ನ ಹಕ್ಕು ಎಂಬ ಧ್ಯೇಯ ವಾಕ್ಯದೊಂದಿಗೆ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಸ್ವೀಪ್ ಸಮಿತಿಯು ಅರ್ಹ ಮತದಾರ ಜಾಗೃತಿಯನ್ನು ಮೂಡಿಸುವ ಕೆಲಸ ಹಾಗೂ ಪ್ರತಿಯೊಬ್ಬರೂ ಮತದಾನ ಮಾಡುವಂತೆ ಅರಿವು ಮೂಡಿಸುತ್ತಿದೆ ಎಂದು ತಿಳಿಸಿದರು.

ಇದೇ ವೇಳೆ ಚುನಾವಣೆ ಪ್ರಕಿಯ ಕುರಿತು ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆ, ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ ಕೃಷ್ಣಮೂರ್ತಿ, ತಹಶೀಲ್ದಾರ್ ಗೀತಾ, ಡಿವೈಎಸ್‌ಪಿ ಗಂಗಾಧರಪ್ಪ, ಮತ್ತಿತರರು ಉಪಸ್ಥಿತರಿದ್ದರು.

# ಮಕ್ಕಳಿಗೆ ಸಾಮಾಜಿಕ ಪ್ರಜ್ಞೆ ಕಲಿಸಿಕೊಡಿ: ಮಾಧುಸ್ವಾಮಿ

• ಪ್ರಜೋದಯ ವರದಿ

**ಅರಸೀಕೆರೆ:** ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆಯಾಗುತ್ತಿದ್ದರೂ ಮಕ್ಕಳಲ್ಲಿ ಸಾಮಾಜಿಕ ಪ್ರಜ್ಞೆ ಹಾಗು ಮಾನವೀಯ ಮೌಲ್ಯ ಬೆಳೆಸುವ ಕೆಲಸವಾಗುತ್ತಿಲ್ಲ. ಹೀಗಾಗಿ ಸಮಾಜಘಾತುಕ ಕೆಲಸಗಳು ಹೆಚ್ಚುತ್ತಿವೆ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ದೊಡ್ಡ ಮೇಟಿಕುರ್ಕೆ ಗ್ರಾಮದ ಎಸ್‌ಎನ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏರ್ಪಡಿಸಿದ್ದ 2025-26ನೇ ಸಾಲಿನ ವಾರ್ಷಿಕೋತ್ಸವ, ಚಿಣ್ಣರ ಲೋಕ ಹಾಗು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿ, ಅಂಕಗಳಿಕೆಯಷ್ಟೇ ಶಿಕ್ಷಣದ ಧ್ಯೇಯವಾಗಬಾರದು. ನೈತಿಕ ನೆಲೆಗಟ್ಟು, ಸಾಮಾಜಿಕ ಪ್ರಜ್ಞೆ ಮೂಡಿಸುವಂತಹ ಶಿಕ್ಷಣದ ಅವಶ್ಯಕತೆ ಹೆಚ್ಚಿದೆ. ಇಂದು ಸಮಾಜದಲ್ಲಿ ವಿದ್ಯಾವಂತರು ಹೆಚ್ಚಾಗುತ್ತಿದ್ದಾರೆ. ಆದರೆ, ಅವರಲ್ಲಿ ನೈತಿಕ ಮತ್ತು ಸಾಮಾಜಿಕ ಪ್ರಜ್ಞೆಯ ಕೊರತೆ ಹೆಚ್ಚುತ್ತಿದೆ ಎಂದರು.

ವಿದ್ಯಾರ್ಥಿಗಳಿಗೆ ಕಲಿಕೆಯ ಹಸಿವಿರಬೇಕು. ಸೋಲನ್ನೇ ಗೆಲುವಿನ ಮೆಟ್ಟಿಲನ್ನಾಗಿ ಮಾಡಿಕೊಳ್ಳುವ ಛಲ ಮತ್ತು ಮನೋಬಲ ಇರಬೇಕು. ಕ್ರಮಬದ್ಧ ಅಧ್ಯಯನ, ವಿನಯ, ತಾಳ್ಮೆ, ಪ್ರಾಮಾಣಿಕತೆಯನ್ನು ಅಳವಡಿಸಿಕೊಂಡರೆ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ. ಮಕ್ಕಳ ಪ್ರತಿಭೆ ಗುರುತಿಸಿ ವೇದಿಕೆ ಕಲ್ಪಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರದ್ದಾಗಿದೆ ಎಂದರು.



ದೇಶದ ಭವ್ಯ ಪ್ರಜೆಗಳಾದ ವಿದ್ಯಾರ್ಥಿಗಳು ಸರಿಯಾದ ದಾರಿಯಲ್ಲಿ ಸಾಗಬೇಕು. ಹದಿಹರೆಯದ ವಯಸ್ಸಿನಲ್ಲಿ ದುಶ್ಚಟಕ್ಕೆ ದಾಸರಾಗಬಾರದು. ಅತಿಯಾದ ಮೊಬೈಲ್ ಬಳಕೆಯೂ ಜೀವನವನ್ನು ತಪ್ಪು ದಾರಿಯತ್ತ ಕೊಂಡೊಯ್ಯುತ್ತದೆ. ಆಧುನಿಕ ತಂತ್ರಜ್ಞಾನದ ಸಾಧಕ-ಬಾಧಕ ಅರಿತು ಮುನ್ನಡೆಯಬೇಕೆಂದು ಕಿವಿಮಾತು ಹೇಳಿದರು.

ಕಣಕಟ್ಟೆ ಹೋಬಳಿ ಶಿಕ್ಷಣ ಸಂಯೋಜಕ ಬಿ.ಬಿ.ಸತೀಶ್ ಅವರು ಮಾತನಾಡಿ, ಮಕ್ಕಳಿಗೆ ಶಿಸ್ತನ್ನು ಬಲವಂತವಾಗಿ ಹೇರಬಾರದು. ಪ್ರೀತಿ, ವಿಶ್ವಾಸದಿಂದ ಅವರನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯಬೇಕು. ಜೀವನದ ಎಲ್ಲಾ ಕನಸುಗಳನ್ನು ಈಡೇರಿಸಬೇಕಾದರೆ ಪುಸ್ತಕ ಪ್ರೇಮವನ್ನು ಬೆಳೆಸಿಕೊಳ್ಳಬೇಕು. ಪೋಷಕರು ಮಕ್ಕಳಿಗೆ ಪ್ರೋತ್ಸಾಹಿಸಬೇಕೆಂದರು.

ಎಸ್‌ಎನ್‌ಎಸ್ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಅಭಿನವ ಶಿವಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಡಿ.ಎಂ. ಕುರ್ಕೆ ಕ್ಲಸ್ಟರ್‌ನ ಧನಂಜಯ ಮಾತನಾಡಿದರು. ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿ ಸಹನ ಅವರಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಶಾಲಾ ಅಭಿವೃದ್ಧಿ ಸಮಿತಿ ಕಾರ್ಯದರ್ಶಿ ಎಸ್.ಎಂ.ನಂದೀಶ್, ನಿರ್ದೇಶಕರಾದ ಡಿ.ಎಸ್.ಸಿದ್ದಪ್ಪ, ಎಸ್.ಮಲ್ಲಿಕಾರ್ಜುನಪ್ಪ, ಎಂ.ಸಿ.ನಟರಾಜ್, ಎಂ.ಎನ್.ಓಂಕಾರಪ್ಪ , ಶಂಕರನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣಸ್ವಾಮಿ, ಮಾಡಾಳು ಶಿವಲಿಂಗಪ್ಪ, ಎಂ.ಡಿ. ಸೋಮಶೇಖರ್, ಮುಖ್ಯ ಶಿಕ್ಷಕ ಸತೀಶ್ ಹಾಗು ಮತ್ತಿತರರಿದ್ದರು.

# ಸ್ಕಾಲರ್ಸ್ ಶಾಲೆಯಲ್ಲಿ ಮಕ್ಕಳ ಸುರಕ್ಷತೆ ಜಾಗೃತಿ



• ಪ್ರಜೋದಯ ವರದಿ

**ಹಾಸನ:** ನಗರದ ಸ್ಕಾಲರ್ಸ್ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಪೊಲೀಸ್ ಇಲಾಖೆಯ ಸಹಯೋಗದಲ್ಲಿ ಮಹಿಳೆ ಮತ್ತು ಮಕ್ಕಳ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ವಿದ್ಯಾರ್ಥಿಗಳಲ್ಲಿ ಸುರಕ್ಷತೆ, ಕಾನೂನು ಅರಿವು ಮತ್ತು ಆತ್ಮವಿಶ್ವಾಸ ಬೆಳೆಸುವ ಉದ್ದೇಶದಿಂದ ಈ ಕಾರ್ಯ ಕ್ರಮ ರೂಪಿಸಲಾಗಿದ್ದು, ಬಾಲಕಿ ಯರು, ಮಕ್ಕಳ ಹಕ್ಕು, ವೈಯಕ್ತಿಕ ಸುರಕ್ಷತೆ, ಸ್ವಯಂ ರಕ್ಷಣೆ ಹಾಗು ದೈನಂದಿನ ಜೀವನದಲ್ಲಿ ಎಚ್ಚರಿಕೆ ಯಿಂದ ಇರುವ ಅಗತ್ಯತೆ ಕುರಿತು ಮಾಹಿತಿ ನೀಡಲಾಯಿತು. ಶಾಲಾ ಆಡಳಿತಾಧಿಕಾರಿ ಡಾ. ಹೆಚ್.ಎನ್.ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ನಡೆಯಿತು. ಬಾಲಕಿಯರು ಅರಿವು ಮತ್ತು ಆತ್ಮವಿಶ್ವಾಸದ ಮೂಲಕ ಶಕ್ತಿವಂತರಾಗಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಪೊಲೀಸ್ ಅಧಿಕಾರಿ ಎಸ್.ಹರ್ಷಿತಾ, ಮಹಿಳಾ ಹೋಮ್‌ಗಾರ್ಡ್‌ಗಳಾದ ಗೌತಮಿ ಹಾಗು ಶಿವಾಮೃತ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಶಾಲೆಯ ಕಾರ್ಯದರ್ಶಿ ಮಮತಾ ಚಂದ್ರಶೇಖರ್ ಮತ್ತಿತರರಿದ್ದರು.

# ಹಿಂದೂ ಧರ್ಮ ಉಳಿವಿಗಾಗಿ ಒಗ್ಗಟ್ಟಿನ ಅವಶ್ಯ ಹೆಚ್ಚಿದೆ

» ಮೊದಲನೇ ಪುಟದಿಂದ

ಸಮಾಜೋತ್ಸವ ಸಮಿತಿ ಉಪಾಧ್ಯಕ್ಷ ಹೆಚ್.ಎನ್. ಲೋಕೇಶ್ ಅವರು ಮಾತನಾಡಿ, ರಾಜ್ಯ, ದೇಶ ಹಾಗು ಧರ್ಮಕ್ಕೆ ಅಪಾಯ ಉಂಟುಮಾಡುವ ಸನ್ನಿವೇಶಗಳು ನಡೆಯುತ್ತಿವೆ. ಹಿಂದೂ ಸಮಾಜವು ಜಾತಿ-ಭೇದ ಬದಿಗೊತ್ತಿ ಒಗ್ಗೂಡದಿದ್ದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದರು.

ಚನ್ನರಾಯಪಟ್ಟಣ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿನಿ ಬಿ.ಕೆ.ಮೋಹನ ಕುಮಾರಿ ಅವರು ಮಾತನಾಡಿ, ಧರ್ಮ ಎಲ್ಲಿ ನೆಲೆಸಿರುತ್ತದೆಯೋ ಅಲ್ಲಿ ಶಾಂತಿ ಹಾಗು ನೆಮ್ಮದಿ ಸದಾ ಉಸಿರಾಡುತ್ತಿರುತ್ತದೆ. ಧರ್ಮವನ್ನು ನಾವು ಕಾಪಾಡಿದರೆ ಅದು ನಮ್ಮನ್ನು ಕಾಪಾಡುತ್ತದೆ.

ಶ್ರವಣಬೆಳಗೊಳ ಹಿಂದೂ ಸಮಾಜೋತ್ಸವ ಸಮಿತಿ ಸದಸ್ಯ ಮನುಗೌಡ ಮಾತನಾಡಿದರು. ತಾಲ್ಲೂಕು ಹಿಂದೂ ಸಮಾಜೋತ್ಸವ ಸಮಿತಿ ಸದಸ್ಯರಾದ ಹೆಚ್ .ಸಿ.ಕೃಷ್ಣಮೂರ್ತಿ, ಪರಮ ಗಂಗಾಧರ್, ಗಿರೀಶ್ ನಂಬಿಹಳ್ಳಿ, ನಟರಾಜ್ ಪೂಮಡಿಹಳ್ಳಿ, ಸತೀಶ್ ಹೊಸಹಳ್ಳಿ, ನಾಗೇಶ್ ಹಿರಿಬಿಳ್ತಿ, ಶ್ರವಣ್, ಪುನೀತ್ ಹೊಸಹಳ್ಳಿ, ದೀಕ್ಷಿತ್, ಪ್ರದೀಪ್, ನಾಗರಾಜ್ ಗೌಡ, ನಿತಿನ್ , ಎಸ್. ಜೆ.ಭಾಸ್ಕರಾಚಾರ್ ಮುಂತಾದವರಿದ್ದರು.

### ಜೀವಿಸುವ ಪ್ರತಿ ಕ್ಷಣ ಹಿಂದೂ ಸಂಸ್ಕೃತಿ: ಜಗ್ಗೇಶ್

ರಾಜ್ಯಸಭಾ ಸದಸ್ಯ, ನಟ ಜಗ್ಗೇಶ್ ಅವರು ಮಾತನಾಡಿ, ಪ್ರತಿಯೊಬ್ಬರಲ್ಲಿಯೂ ಆಧ್ಯಾತ್ಮಿಕ ಚಿಂತನೆ ಚಿಲುಮೆಯಾಗಿ ಉಕ್ಕಬೇಕು. ನಾವು ಪ್ರತಿದಿನ ಬದುಕುವ ಪ್ರತಿ ಕ್ಷಣದ ಸಂಸ್ಕೃತಿಯೇ ಹಿಂದೂ ಧರ್ಮ ಎಂದರು.

ಹಿಂದೂ ಧರ್ಮದ ಮೇಲೆ ತಲೆ ತಲಾಂತರಗಳಿಂದ ದಬ್ಬಾಳಿಕೆಯಾಗುತ್ತಲೇ ಇದೆ. ಅನ್ಯ ಧರ್ಮಿಯರು ನಮ್ಮ ದೇಶವನ್ನು ಆಳಿದ್ದಾರೆ. ನಮ್ಮ ಹಿರಿಯರ ಮೇಲೆ ಅಟ್ಟಹಾಸ ಮೆರೆದಿದ್ದಾರೆ. ಆದರೆ, ಹಿಂದೂ ಧರ್ಮ ಎಲ್ಲಾ ಸವಾಲುಗಳನ್ನು ಮೆಟ್ಟಿ ಪ್ರಬಲವಾಗಿ ಬೆಳೆದಿದೆ. ಅದಕ್ಕೆ ಹಿಂದೂಪರ ಹೋರಾಟಗಾರರ ತ್ಯಾಗ ಬಲಿದಾನ ಕಾರಣವೆಂದರು.

ಧರ್ಮದ ವಿಚಾರ ಬಂದಾಗ ಅನ್ಯರಿಗಿಂತ ನಮ್ಮವರೇ ಅಪಪ್ರಚಾರ ಮಾಡುವುದರಲ್ಲಿ ಮುಂದೆ ನಿಲ್ಲುತ್ತಾರೆ. ಬಹುತೇಕ ದೇಶಗಳಲ್ಲಿ ಅಲ್ಲಿಯ ಜನರು ದೇಶ ಹಾಗು ಭಾಷೆಯನ್ನು ಗೌರವಿಸುತ್ತಾರೆ. ನಮ್ಮಲ್ಲಿ ಕೆಲವು ಕಿಡಿಗೇಡಿಗಳು ನಮ್ಮ ನಮ್ಮಲ್ಲಿ ಬೆಂಕಿ ಹಚ್ಚಿ ಅವರ ಕೈಗಳನ್ನು ಬಿಸಿ ಮಾಡಿಕೊಳ್ಳುತ್ತಾರೆ. ನಾವು ಎಚ್ಚೆತ್ತುಕೊಳ್ಳದಿದ್ದರೆ ಏಕತೆಗೆ ಧಕ್ಕೆ ತರುತ್ತಾರೆ. ಸಮಾಜವನ್ನು ಒಗ್ಗೂಡಿಸುವ ಉದ್ದೇಶದಿಂದ ರಾಜ್ಯಾದ್ಯಂತ ಹಿಂದೂ ಸಮಾಜೋತ್ಸವ ಆಯೋಜಿಸಲಾಗಿದೆ ಎಂದರು.

# 4 ಹಸುಗಳ ಕಳವು



• ಪ್ರಜೋದಯ ವರದಿ

**ಅರಸೀಕೆರೆ:** ತಗಡಿನ ಶೆಡ್‌ನಲ್ಲಿ ಕಟ್ಟಿಹಾಕಿದ್ದ 4 ಹಸುಗಳನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಕಾಳನಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನೇಮಚಂದ್ರ ನಾಯಕ ಎಂಬುವವರಿಗೆ ಸೇರಿದ 1 ಲಕ್ಷ ರೂ. ಮೌಲ್ಯದ ಹಸುಗಳನ್ನು ಕಳವು ಮಾಡಲಾಗಿದೆ. ನೇಮಚಂದ್ರ 10 ಹಸುಗಳನ್ನು ಸಾಕಾಣಿಕೆ ಮಾಡಿಕೊಂಡಿದ್ದಾರೆ. ಶುಕ್ರವಾರ ರಾತ್ರಿ ಮನೆ ಪಕ್ಕದ ಶೆಡ್‌ನಲ್ಲಿ ಹಸುಗಳನ್ನು ಕಟ್ಟಿದ್ದರು. ಮಾರನೇ ದಿನ ಬಂದು ನೋಡಿದಾಗ ನಾಲ್ಕು ಹಸುಗಳು ಇಲ್ಲದಿರುವುದು ಗೊತ್ತಾಗಿದೆ. ಸುತ್ತ ಮುತ್ತಲ ಜಮೀನುಗಳಲ್ಲಿ ಹುಡುಕಾಡಿ ದರೂ ಹಸುಗಳು ಸಿಕ್ಕಿಲ್ಲ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



# ಅರಕಲಗೂಡಿನಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ

ಅರಕಲಗೂಡು : ಪಟ್ಟಣದ ಪಥಂಜಲಿ ಯೋಗ ಶಿಕ್ಷಣ ಸಮಿತಿ ಸದಸ್ಯರು ರಥ ಸಪ್ತಮಿ ಅಂಗವಾಗಿ ಭಾನುವಾರ ಸಾಮೂಹಿಕ ಸೂರ್ಯ ನಮಸ್ಕಾರ ನಡೆಸಿದರು.

ಪಟ್ಟಣದ ದೇವರಾಜ ಅರಸು ಭವನದ ಮೇಲಂತಸ್ಥಿನಲ್ಲಿ ನಡೆದ ಕಾರ್ಯಕ್ರಮದಲ್ಲಿ 30ಕ್ಕೂ ಹೆಚ್ಚು ಯೋಗ ಬಂಧುಗಳು 108ಸೂರ್ಯ ನಮಸ್ಕಾರ ನಡೆಸಿದರು. ತಾಲ್ಲೂಕು ಮಹಿಳಾ ಸಂಚಾಲಕರಾದ ಯೋಗ ಶಿಕ್ಷಕಿ ಮಣಿ ಅವರು ಮಾತನಾಡಿ, ಸೂರ್ಯ ತನ್ನ ಪಥವನ್ನು ಬದಲಾವಣೆ ಮಾಡುವ ರಥಸಪ್ತಮಿಯಂದು ನಮಸ್ಕಾರ ಪ್ರಿಯನಾದ ಸೂರ್ಯನಿಗೆ ಮಂತ್ರ ಸಹಿತ ನಮಸ್ಕಾರ ನಡೆಸುವುದರಿಂದ ಆತ ಸಂಪ್ರೀತನಾಗಿ ಆರೋಗ್ಯ ನೀಡಿ ಕಾಪಾಡುತ್ತಾನೆ, ಸಮಿತಿ ಪ್ರತಿ ವರ್ಷ ಸಾಮೂಹಿಕ ಸೂರ್ಯ ನಮಸ್ಕಾರ ನಡೆಸುತ್ತಾ ಬಂದಿದೆ ಎಂದರು. ಸಮಿತಿ ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಉಚಿತ ಯೋಗ ಶಿಕ್ಷಣ ನೀಡುತ್ತಿದೆ. ಸಾರ್ವಜನಿಕರು ಇದರ ಉಪಯೋಗ ಪಡೆಯುವಂತೆ ಕೋರಿದರು.

ಕಾರ್ಯಕ್ರಮದಲ್ಲಿ ನಂದಿನಿ, ಪ್ರಕಾಶ್, ರೇಣುಕಾ, ಉಷಾ, ಜಲಜಾಕ್ಷಿ ಇತರರು ಇದ್ದರು.




ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019